**ಹವೆಯಲ್ಲಿಯ ರೇಖಾಂಕನ:** ನಿಮಗೆ ಇಷ್ಟವಾಗುವ ಹೂವುಗಳು ಅಥವಾ ಹಣ್ಣುಗಳ ಆಕಾರ ಹವೆಯಲ್ಲಿ ಬೆರಳಿನಿಂದ ತೆಗೆದು ನೋಡಿರಿ. ಈಗ ಅದೇ ಆಕಾರ ಕಾಗದದ ಮೇಲೆ ಪೆನ್ಸಿಲಿನಿಂದ ತೆಗೆಯಿರಿ.

**ಮುಕ್ತ ರೇಷೆ:** ಕಾಗದಗಳ ಮೇಲೆ ನಿಲ್ಲದೆ ಒಂದೇ ಸವನೆ ವರ್ತುಳಾಕಾರ, ನಾಗಮೋಡಿ ಮತ್ತು ಓರೆಯಾಗಿ ರೇಷೆ ತೆಗೆಯಿರಿ. ಈ ರೇಷೆಯಲ್ಲಿಂದ ನಿಮಗೆ ಯಾವುದಾದರೊಂದು ಮುಖ ಅಥವಾ ಗುಡ್ಡದ ಹಾಗೆ ಆಕಾರ ಕಾಣಿಸುತ್ತದೆಯೇ ಎಂಬುದನ್ನು ನೋಡಿರಿ.

**ಮನುಷ್ಯರ ಚಿತ್ರಗಳು:** ಮನುಷ್ಯರ ಚಲನೆವಲನೆ ತೋರಿಸುವ ಸಲುವಾಗಿ (ಕುಳಿತುಕೊಳ್ಳುವುದು/ನಡೆಯುವುದು/ಓಡುವುದು/ಕುಣಿಯುವುದು) ಸರಳ/ ಸುಲಭ ರೇಷೆಗಳ ಮಾಧ್ಯಮಗಳಿಂದ ತೆಗೆದ ಕಡ್ಡಿ ಚಿತ್ರಗಳು ನೋಡಿ ಹೀಗೆ ಕೆಲವು ಮನುಷ್ಯಕ ಆಕೃತಿಗಳನ್ನು ತೆಗೆಯುವ ಅಭ್ಯಾಸ ಮಾಡಿರಿ.



**ನಿಸರ್ಗ ನಿರ್ಮಿತ ಹಾಗೂ ಮಾನವ ನಿರ್ಮಿತ ಘಟಕಘಲ ಸರಳ ರೇಖಾಟನೆ.**

ನಮ್ಮ ಸುತ್ತಮುತ್ತಲು ವಿವಿಧ ಪ್ರಕಾರಗಳ ವಸ್ತು, ಘಟಕ ನೋಡಲು ದೊರೆಯುತ್ತವೆ. ಇದರಲ್ಲಿಯ ಕೆಲವು ಘಟಕಗಳು ನಿಸರ್ಗ ನಿರ್ಮಿತ ಇರುತ್ತವೆ ಇನ್ನೂ ಕೆಲವು ಮಾನವ ನಿರ್ಮಿತ ಇರುತ್ತವೆ.

ನಿಸರ್ಗ ನಿರ್ಮಿತ ಘಟಕ – ಉದಾಹರಣೆ: ಗಿಡಗಳು, ಮರ, ಎಲೆ, ಹೂವು, ಪಕ್ಷಿ, ಪ್ರಾಣಿ, ಗುಡ್ಡ, ನದಿ ಇತ್ಯಾದಿ. ಮಾನವ ನಿರ್ಮಿತ ಘಟನೆ – ಉದಾಹರಣೆ: ಮನೆ, ಗಾಡಿ, ಪುಸ್ತಕ, ಸಂಗಣಕ, ಬ್ಯಾಟ, ಲೋಟ ಇತ್ಯಾದಿ.

ಇದರ ಹೊರತಾಗಿ ನೀವು ನೋಡಿರುವ ಐದು ನೈಸರ್ಗಿಕ ಘಟಕಗಳ ಹಾಗೂ ಐದು ಮಾನವ ನಿರ್ಮಿತ ವಸ್ತುಗಳ ಪಟ್ಟಿ ತಯಾರಿಸಿರಿ.

- ಮಕ್ಕಳ ಅನುಭವ ವಿಶ್ವದಲ್ಲಿಯ ವಸ್ತು, ಹಣ್ಣು ಇವುಗಳ ಹೆಸರು ತೆಗೆದುಕೊಳ್ಳುತ್ತ ಅವರಿಗೆ ಹವೆಯಲ್ಲಿ ಅವುಗಳ ಆಕಾರ ತೆಗೆಯುವ ಸಲುವಾಗಿ ಪ್ರೋತ್ಸಾಹನೆ ಕೊಡಬೇಕು.
- ಕಡ್ಡಿಯ ಚಿತ್ರ ತೆಗೆಯುವ ಸಲುವಾಗಿ ಕೆಲವು ಕೃತಿಗಳ ಹೆಸರು ಹೇಳಿರಿ ಹಾಗೂ ಅಭ್ಯಾಸ ಮಾಡುವ ಸಲುವಾಗಿ ಅವಕಾಶ ಕೊಡಬೇಕು.

CG – ೧,೨
C – ೧.೨, ೨.೧
LO–0೩AE೨, ೭,೧೫

| ನಿಸರ್ಗ ನಿರ್ಮಿತ ಘಟಕ | ಮಾನವ ನಿರ್ಮಿತ ಘಟಕ |
|---|---|
| .......................... | .......................... |
| .......................... | .......................... |
| .......................... | .......................... |
| .......................... | .......................... |
| .......................... | .......................... |

ನಿಮ್ಮ ಇಷ್ಟದ ಪ್ರಕಾರ ಪಟ್ಟಿಯಲ್ಲಿಯ ನೀವು ನೋಡಿರುವಂತಹ ಒಂದು ನೈಸರ್ಗಿಕ ಘಟಕದ ಹಾಗೂ ಒಂದು ಮಾನವನಿರ್ಮಿತ ವಸ್ತುಗಳ ಚಿತ್ರ ವಹಿಯಲ್ಲಿ ಪೆನ್ಸಿಲ್‌ನಿಂದ ತೆಗೆಯಿರಿ.

ಚಿತ್ರ ತೆಗೆಯುವ ಮುಂಚೆ ಆ ಘಟಕ ಅಥವಾ ಆ ವಸ್ತುವಿನ ಎಲ್ಲ ಮಾಹಿತಿ ನೆನಪಿಸಿಕೊಳ್ಳಿ. ಅದರ ಆಕಾರ, ರಚನೆ, ಬಣ್ಣ, ಸ್ಪರ್ಶ ಇವುಗಳನ್ನು ನೆನಪಿಸಲು ಪ್ರಯತ್ನಿಸಿರಿ. ತದನಂತರ ಆ ಘಟಕ ಮೂಲ ಆಕಾರ ಹಾಗೂ ಅದರಲ್ಲಿಯ ಮಾಹಿತಿಯನ್ನು ಸೂಕ್ಷ್ಮವಾಗಿ ಚಿತ್ರಿಸಿ.

ಈಗ ನೀವು ನೋಡಿದ ನೈಸರ್ಗಿಕ ಘಟಕ ಅಥವಾ ಕೆಲವು ವಸ್ತುಗಳ ತೆಗೆದ ಚಿತ್ರಗಳನ್ನು ನಿಮ್ಮ ಶಿಕ್ಷಕರಿಗೆ ಹಾಗೂ ವರ್ಗ ಮಿತ್ರಕರಿಗೆ ತೋರಿಸಿರಿ.

### ಪ್ರಸಂಗಗಳ ಸ್ಮರಣಚಿತ್ರ

ಈಗ ನಾವು ನಿಮ್ಮ ನೆನಪಿನ (ಕಲ್ಪನೆಯ) ಒಂದು ಚಿತ್ರ ತೆಗೆಯೋಣ. ನಿಮಗೆ ನಿಮ್ಮ ಶಾಲೆಯ ಮೊದಲನೆಯ ದಿವಸ ನೆನಪಿಗೆ ಬರುತಿರಬಹುದು.

ಈಗ ಹಾಗಾದರೆ ನಾವು 'ಶಾಲೆಯ ಮೊದಲನೆಯ ದಿವಸ' ಈ ವಿಷಯದ ಬಗ್ಗೆ ಸ್ಮರಣಚಿತ್ರ ತೆಗೆಯೋಣ.

೧) **(ನೆನಪಿಸೋಣ) –** ಶಾಲೆಯ ಮೊದಲನೆಯ ದಿವಸ ಹೇಗಿತ್ತು? ಶಾಲೆಗೆ ಹೇಗೆ ಬಂದಿರಿ? ಶಾಲೆಯ ಕಟ್ಟಡ ವರ್ಗ ನೆನಪಿಗೆ ಬರುತ್ತಾ? ಶಾಲೆಯಲ್ಲಿ ನಿಮ್ಮ ಸ್ವಾಗತ ಹೇಗೆ ಮಾಡಿದರು? ನಿಮಗೆ ಶಾಲೆಗೆ ಬಿಡಲು ಯಾರು ಬಂದಿದ್ದರು? ಶಾಲೆಯ ಪರಿಸರ ಹೇಗಿತ್ತು? ಶಾಲೆಗೆ ಬರುವಾಗ ನಿಮಗೆ ಹೇಗೆ ಅನಿಸಿತು? ಇದರಲ್ಲಿ ನಿಮಗೆ ಯಾವ ವಿಷಯ ಸ್ಪಷ್ಟವಾಗಿ ನೆನಪಿಗೆ ಬರುತ್ತಿದೆ ಎಂಬುದು ನಿಶ್ಚಿತ ಮಾಡು. ಆ ಘಟಕ ಯಾವ ಭೌಮಿತಿಕ ಆಕಾರದ ಹಾಗೆ ಕಾಣಿಸುತ್ತದೆ ಎಂಬುದನ್ನು ಖಚಿತ ಪಡಿಸಿ ರೇಖಾಟನೆ ಮಾಡು.

೨) **ಮುಖ್ಯ ಆಕೃತಿಯ ರಚನೆ –** ಚಿತ್ರದ ಮಧ್ಯಭಾಗದಲ್ಲಿ ಸ್ವಂತದ ಅಥವಾ ಗೆಳೆಯರ ಆಕೃತಿ ತೆಗೆಯಿರಿ. ಮುಖ್ಯ ಆಕೃತಿಯ ರಚನೆ, ಚಿತ್ರದಲ್ಲಿಯ ಮಹತ್ವದ ಘಟಕ ಹಾಗೂ ಆ ಘಟಕಗಳ ಅಂದಾಜು ಆಕೃತಿಗಳನ್ನು ಪೆನ್ಸಿಲ್‌ನಿಂದ ಸಹಜವಾಗಿ ತೆಗೆಯಿರಿ.

೩) **ವಿವರಗಳು –** ಚಿತ್ರದಲ್ಲಿಯ ಎಲ್ಲ ಘಟಕಗಳ ರಚನೆ ನಿಶ್ಚಿತ ಆದ ನಂತರ ಕಲ್ಪನೆಯ ಹಾಗೆ ಸೂಕ್ಷ್ಮ ವಿವರಗಳನ್ನು ತೆಗೆಯಿರಿ. ಅದು ಶಾಲೆಯ ಗೊಡೆ, ಶಾಲೆಯ ಪ್ರವೇಶದ್ವಾರಕ್ಕೆ ಹಚ್ಚಿರುವ ತೋರಣ, ಸ್ವಾಗತದ ಫಲಕ ಇತ್ಯಾದಿ.

೪) **ಬಣ್ಣದ ಕೆಲಸ –** ಸ್ಮರಣ ಚಿತ್ರ ತೆಗೆದು ಪೂರ್ಣವಾದ ನಂತರ ಬಣ್ಣದ ಕೆಲಸ ಮಾಡಿರಿ. ಸ್ಮರಣಚಿತ್ರದಲ್ಲಿ ನಾವು ಏನು ನೋಡಿದೆವು ಅದನ್ನು ಹಾಗೆ ಇಳಿಸಲು (ತೆಗೆಯಲು) ಪ್ರಯತ್ನ ಮಾಡಲಾಗುತ್ತದೆ. ನಿಮಗೆ ಇಷ್ಟವಿರುವ ಬಣ್ಣ ತುಂಬಿ ಚಿತ್ರವನ್ನು ಪೂರ್ಣಗೊಳಿಸಿರಿ.

- ನಿಸರ್ಗ ನಿರ್ಮಿತ/ಮಾನವ ನಿರ್ಮಿತ ಘಟಕಗಳ ವರ್ಣನೆ ಮಾಡುವಾಗ ಅದರಲ್ಲಿಯ ದೃಶ್ಯ ವಿವರವನ್ನು ಹೇಳಲು ಪ್ರೋತ್ಸಾಹನೆ ಕೊಡಬೇಕು.
- ವರ್ಣನೆಗನುಸರಿಸಿ ಚಿತ್ರಗಳಲ್ಲಿ ವಿವರಗಳನ್ನು ತೋರಿಸುವ ಸಲುವಾಗಿ ಪ್ರೋತ್ಸಾಹನೆ ಕೊಡಬೇಕು.

CG – ೧
C – ೧.೧
LO–೦೩AE೦೨

ಕೆಳಗೆ ಕೊಟ್ಟ ಎರಡು ಚಿತ್ರಗಳನ್ನು ನೋಡಿರಿ ಮತ್ತು ಅದರಲ್ಲಿಯ ವ್ಯತ್ಯಾಸ ತಿಳಿದುಕೊಳ್ಳಿರಿ.

ಇದರಲ್ಲಿ ಒಂದು ಸ್ಮರಣಚಿತ್ರ ಇದೆ ಇನ್ನೊಂದು ಕಲ್ಪನೆ ಚಿತ್ರ. **ಸ್ಮರಣ ಚಿತ್ರ**ದಲ್ಲಿ ನಾವು ನೋಡಿರುವ ಪ್ರಸಂಗ, ವಸ್ತು, ಘಟಕ ಹೇಗೆ ಇದೆ ಹಾಗೆಯೇ ತೆಗೆಯಲು ಹಾಗೂ ಬಣ್ಣಿಸಲು ಪ್ರಯತ್ನಿಸಲಾಗುತ್ತದೆ.

**ಕಲ್ಪನೆಚಿತ್ರ** ಇದು ಸ್ಮರಣ ಚಿತ್ರಕ್ಕಿಂತ ಬೇರೆ ಇದೆ. ಆ ಚಿತ್ರಗಳಲ್ಲಿ ನಾವಿನ್ಯಪೂರ್ಣ ಮತ್ತು ವಾಸ್ತವದಕ್ಕಿಂತ ಬೇರೆ ಘಟಕ ಕಾಣುತ್ತದೆ. ಈ ಚಿತ್ರಗಳಲ್ಲಿ ನಮಗೆ ನಮ್ಮ ಮನಸ್ಸಿನಲ್ಲಿಯ ಬೇರೆ ಒಂದು ಕಲ್ಪನೆ ತೋರಿಸಲು ಬರುತ್ತದೆ. ನಮ್ಮ ಮನಸ್ಸಿನಲ್ಲಿಯ ಮೋಜಿನ ಒಂದು ಕಲ್ಪನೆಯನ್ನು ಚಿತ್ರದ ಮೂಲಕ ತೆಗೆಯಲಾಗುತ್ತದೆ. ಇಂತಹ ಚಿತ್ರಗಳಿಗೆ ಕಲ್ಪನೆ ಚಿತ್ರ ಎಂದು ಕೂಡ ಹೇಳಲಾಗುತ್ತದೆ.



..............................................................



..............................................................

ಮೇಲಿನ ಎರಡು ಚಿತ್ರಗಳಲ್ಲಿ ಯಾವ ಚಿತ್ರ ಸ್ಮರಣಚಿತ್ರ ಹಾಗೂ ಯಾವ ಚಿತ್ರ ಕಲ್ಪನೆಚಿತ್ರ ಇದೆ ಎಂಬುದನ್ನು ಗುರುತಿಸಿ ಆ ಆ ಚಿತ್ರದ ಕೆಳಗೆ ಅದರ ಹೆಸರು ಬರೆಯಿರಿ.

**ಕಲ್ಪನೆಯಲ್ಲಿಂದ ಒಂದು ಬೇರೆ ತರಹದ ಕಲ್ಪನೆ ಚಿತ್ರ ತೆಗೆಯೋಣ.**

ಈ ಘಟಕಗಳು ಪ್ರತ್ಯಕ್ಷದಲ್ಲಿ ಇರುವುದಿಲ್ಲ ಆದರೆ ನಾವು ಹಾಗೆ ಯೋಚನೆ ಮಾಡಬಹುದು. ಇಂತಹ ಕಲ್ಪನೆಗಳ ಮೇಲೆ ಆಧಾರಿತ ಚಿತ್ರಗಳಿಗೆ ಕಲ್ಪನಾ ಚಿತ್ರ ಎನ್ನುತ್ತಾರೆ. ಪಕ್ಷಿಗಳಿಗೆ ಹೇಗೆ ರೆಕ್ಕೆಗಳಿರುತ್ತದೆ ಹಾಗೆ ನಮಗೆ ರೆಕ್ಕೆಗಳಿರುವುದಿಲ್ಲ. ಒಂದು ವೇಳೆ ನಿಮಗೆ ರೆಕ್ಕೆಗಳಿದ್ದರೆ?

ನಡೆಯಿರಿ ಹಾಗಿದ್ದರೆ ನಾವು 'ನಮಗೆ ರೆಕ್ಕೆಗಳಿದ್ದರೆ...' ಈ ವಿಷಯದ ಮೇಲೆ ಕಲ್ಪನೆಚಿತ್ರ ತೆಗೆಯೋಣ.

**ಕೆಳಗೆ ಕೊಟ್ಟ ಹಂತ ಹಂತವಾಗಿ ಚಿತ್ರ ತೆಗೆಯಿರಿ.**

**೩) ಕಲ್ಪನೆ ಚಿತ್ರ –** ನನಗೆ ರೆಕ್ಕೆಗಳಿದ್ದರೆ ನಾನು ದೈನಂದಿನ ಜೀವನದಲ್ಲಿ ಏನೇನು ಮಾಡಬಹುದಾಗಿತ್ತು? ಶಾಲೆಗೆ ಹೇಗೆ ಬರುತ್ತಿದ್ದೆ? ಪಕ್ಷಿಗಳು ಹಾಗೆ ಗಿಡಗಳ ಮೇಲೆ, ಗುಡ್ಡದ ಮೇಲೆ ಹಾರಾಡುತ್ತ ಹೋಗುತ್ತಿದ್ದೆ ಏನು? ಚಂದ್ರನ ಮೇಲೆ ಹೋಗುತ್ತಿದ್ದೆ ಏನು? ರೆಕ್ಕೆಗಳಿಂದ ಹಾರಿ ಇನ್ನೂ ಏನೇನು ಮಾಡುತ್ತಿದ್ದೆ? ನಿಮ್ಮ ರೆಕ್ಕೆ ಯಾವ ಬಣ್ಣದಿರುತ್ತವೆ ಇದರ ಕಲ್ಪನೆ ಮಾಡಿ. ಕಲ್ಪನೆ ಮಾಡಿರುವ ಪ್ರಸಂಗಗಳ ಮೇಲೆ ನಿಮಗೆ ಇಷ್ಟವಾಗುವ ಕಲ್ಪನೆ ನಿಶ್ಚಿತ ಪಡಿಸಿರಿ.

- ಮಕ್ಕಳಿಗೆ ಮಾನವನ ಆಕೃತಿ ತೆಗೆಯುವಾಗ ಕಡ್ಡಿ ಚಿತ್ರ ತೆಗೆಸಿ ಪೂರ್ಣ ಆಕೃತಿಯ ಕಡೆಗೆ ಒಯ್ಯುವಂತಹ ಅಭ್ಯಾಸ ಮಾಡಿಸಿರಿ.
- ಸ್ಮರಣಚಿತ್ರ ಮತ್ತು ಕಲ್ಪನೆಚಿತ್ರ ಇದರಲ್ಲಿಯ ವ್ಯತ್ಯಾಸ ಸ್ಪಷ್ಟಪಡಿಸಿರಿ.

CG – ೧
C – ೧.೧
LO–೦೩AE೦೩

೨) **ಮುಖ್ಯ ಆಕೃತಿ –** ಚಿತ್ರಗಳ ಮಧ್ಯಭಾಗದಲ್ಲಿ ನಿಮ್ಮ ಕಲ್ಪನೆಯಲ್ಲಿಯ ಆಕೃತಿ ಪೆನ್ಸಿಲಿನಿಂದ ಸಹಜವಾಗಿ (ಮೆಲ್ಲನೆ) ತೆಗೆಯಿರಿ. ವಿವರವನ್ನು ನಿಮ್ಮ ಕಲ್ಪನೆಯಲ್ಲಿಯ ಇನ್ನಿತರ ಪಾರ್ಶ್ವಭೂಮಿಯಲ್ಲಿಯ ವಿವರವನ್ನು ಸೂಕ್ಷ್ಮವಾಗಿ ಚಿತ್ರದಲ್ಲಿ ತೆಗೆಯಿರಿ.

ಉದಾ – ಗುಡ್ಡ, ಮೋಡ, ಚಂದ್ರ, ಕಾಮನಬಿಲ್ಲು ಹೀಗೆ ಕಲ್ಪನೆಗೆ ಅನುಸರಿಸಿ ಪಾರ್ಶ್ವಭೂಮಿ ತೆಗೆಯಿರಿ.

೩) **ಕಲ್ಪನೆಯಲ್ಲಿ ಎಲ್ಲವು ಸಾಧ್ಯವಿರುತ್ತದೆ!** ಗಿಡಗಳಿಗೆ ಹೂವುಗಳ ಬದಲು ಚಾಕಲೇಟ್ಸಗಳು ಹತ್ತಿರುವುದನ್ನು ತೋರಿಸಿರಿ ಅಥವಾ ಮೊಡಗಳಿಂದ ಮಳೆಯ ಬದಲು ಬಣ್ಣದ ಗೋಲಿಗಳನ್ನು ಬಿಳುವುದನ್ನು ತೋರಿಸಿರಿ. ಹೀಗೆ ನೀವು ಏನನ್ನು ಕೂಡಾ ಕಲ್ಪನೆ ಮಾಡಬಹುದು.

೪) **ಬಣ್ಣದ ಕೆಲಸ :** ನಿಮ್ಮ ಇಷ್ಟದ ಪ್ರಕಾರ ಯಾವುದೊಂದು ಅಪರಿಚಿತ ಬಣ್ಣ ನೀವು ಕಲ್ಪನೆಯ ಚಿತ್ರ ಬಣ್ಣಿಸುವ ಸಲುವಾಗಿ ಉಪಯೋಗಿಸಬಹುದು. ನಿಮ್ಮ ಕಲ್ಪನಾ ಚಿತ್ರ ವರ್ಗದಲ್ಲಿ ಗೆಳೆಯರಿಗೆ ಹಾಗೂ ಶಿಕ್ಷಕರಿಗೆ ತೋರಿಸಿರಿ ಮತ್ತು ನಿಮ್ಮ ಚಿತ್ರದಲ್ಲಿಯ ಕಲ್ಪನೆಯ ವಿಷಯದ ಬಗ್ಗೆ ಚರ್ಚೆ ಮಾಡಿರಿ.

**ಗಮನದಲ್ಲಿ ಇಡಿರಿ.**

ಕಲ್ಪನೆಯ ಚಿತ್ರದಲ್ಲಿ ಬಣ್ಣಗಳ ಯಾವುದೇ ರೀತಿ ಬಂಧನ ಇರುವುದಿಲ್ಲ. ನೀವು ನಿಮ್ಮ ಸ್ವಂತದ ಜಗತ್ತು ತಯಾರಿಸಬಹುದು.

ಉದಾ – ನೇರಳೆ ಬಣ್ಣಿನ ಹುಲ್ಲು, ಗುಲಾಬಿ ಬಣ್ಣದ ಆಕಾಶ ತೆಗೆಯಬಹುದು.

## ನನ್ನ ಕೃತಿ.

೧) ನಿಮಗೆ ಇಷ್ಟವಾಗುವ ಪ್ರಾಣಿಗಳ ಚಿತ್ರ ತೆಗೆಯಿರಿ.
೨) ಯಾವುದೊಂದು ಹಬ್ಬದ ಚಿತ್ರ ತೆಗೆಯಿರಿ.
೩) ''ಆಕಾಶದಲ್ಲಿ ಹಾರುವ ನನ್ನ ಗಾಡಿ'' ಈ ವಿಷಯದ ಮೇಲೆ ಕಲ್ಪನೆಚಿತ್ರ ತೆಗೆಯಿರಿ.
೪) ''ನನ್ನ ಕನಸ್ಸಿನಲ್ಲಿಯ ಪರಿ'' ಈ ವಿಷಯದ ಮೇಲೆ ಕಲ್ಪನೆಯ ಚಿತ್ರ ತೆಗೆಯಿರಿ.

- ವಿದ್ಯಾರ್ಥಿಗಳ ಕಲ್ಪನೆಯಶಕ್ತಿಗೆ ಚಾಲನೆ ದೊರೆಯುವಂತಹ ಪ್ರಶ್ನೆ ಕೇಳಿ ಕಲ್ಪನೆಯ ಚಿತ್ರ ತೆಗೆಯಲು ಹಾಗೂ ಬಣ್ಣಿಸಲು ಪ್ರೋತ್ಸಾಹಿಸಿರಿ.

CG – ೧
C – ೧.೧
LO–೦೩AE೦೩,೪

# ೪. ವಸ್ತುಗಳ ಜಗತ್ತಿನಲ್ಲಿ

ದೈನಂದಿನ ಜೀವನದಲ್ಲಿ ನಾವು ಎಷ್ಟೊ ತರಹದ ವಸ್ತುಗಳನ್ನು ಉಪಯೋಗಿಸುತ್ತೆವೆ. ಮನೆಯಲ್ಲಿ, ಶಾಲೆಯಲ್ಲಿ, ಪರಿಸರದಲ್ಲಿ ಎಷ್ಟೋ ಸಣ್ಣ - ದೊಡ್ಡ ವಸ್ತು ನಮಗೆ ಕಂಡುಬರುತ್ತವೆ ವಸ್ತುಗಳ ಉಪಯೋಗ ಮಾಡುವಾಗ ಆ ವಸ್ತುಗಳ ವೈಶಿಷ್ಟ್ಯಗಳ ಬಗ್ಗೆ ನಮಗೆ ಅರಿವಾಗುವುದು. ಅವುಗಳ ಆಕಾರ, ಉದ್ದ, ಅಗಲ, ದಪ್ಪ, ಬಣ್ಣ ಹಾಗೂ ಅದರ ಪೋತ ಇತ್ಯಾದಿ.

ವಸ್ತುಗಳ ಚಿತ್ರ ತೆಗೆಯುವ ಸಲುವಾಗಿ ಪ್ರಥಮ ಆ ವಸ್ತುಗಳ ನಿರೀಕ್ಷಣೆ ಮಾಡಿ ಅವುಗಳ ವೈಶಿಷ್ಟ್ಯಗಳನ್ನು ತಿಳಿದುಕೊಳ್ಳುವುದು ಅವಶ್ಯಕವಾಗಿರುತ್ತದೆ ವಸ್ತುಗಳ ನಿರೀಕ್ಷಣೆ ಮಾಡಿ ಅವುಗಳ ವೈಶಿಷ್ಟ್ಯಗಳನ್ನು ತಿಳಿದುಕೊಳ್ಳೋಣ. ವಸ್ತುಗಳ ಆಕಾರ, ಆ ವಸ್ತುಗಳಲ್ಲಿ ಅಡಗಿರುವ ಭೌಮಿತಿಕ ಆಕಾರ, ಅದರ ಸಲುವಾಗಿ ಅವಶ್ಯಕವಿರುವ ರೇಷೆ, ಅವುಗಳ ಬಣ್ಣ ಹಾಗೆಯೇ ಅವುಗಳ ಪೋತ ಇತ್ಯಾದಿ.

## ಆಕಾರ ಮತ್ತು ವಸ್ತು

(ನಮ್ಮ) ನಿಮ್ಮ ಪರಿಸರದಲ್ಲಿಯ ವಸ್ತುಗಳ ನಿರೀಕ್ಷಣೆ ಮಾಡಿರಿ ಮತ್ತು ಕೆಳಗಿನ ಭೌಮಿತಿಕ ಆಕಾರಗಳನುಸಾರ ಅವುಗಳ ಗುಂಪು ಮಾಡಿ ವಸ್ತುಗಳ ಹೆಸರು ಬರೆಯಿರಿ.

| ಚೌಕೋನ ಆಕಾರದ ವಸ್ತುಗಳು | ತ್ರಿಕೋನಾಕಾರದ ವಸ್ತುಗಳು | ಗೋಲಾಕಾರದ ವಸ್ತುಗಳು | ಅನೇಕ ಭೌಮಿತಿಕ ಆಕಾರ ಇರುವ ವಸ್ತುಗಳು |
|---|---|---|---|
| ........................ | ........................ | ........................ | ........................ |
| ........................ | ........................ | ........................ | ........................ |
| ........................ | ........................ | ........................ | ........................ |
| ........................ | ........................ | ........................ | ........................ |

## ವಸ್ತುಗಳಲ್ಲಿ ಅಡಗಿರುವ ಭೌಮಿತಿಕ ಆಕಾರ ಶೋಧಿಸೋಣ.

ಚಿತ್ರದಲ್ಲಿ ಕೊಟ್ಟಿರುವ ವಸ್ತುಗಳ ನಿರೀಕ್ಷಣೆ ಮಾಡಿರಿ. ಅದರಲ್ಲಿ ಅಡಗಿರುವ ಭೌಮಿತಿಕ ಆಕಾರ ಶೋಧಿಸಿ ಬದಿಯ ಚೌಕಟ್ಟಿನಲ್ಲಿ ತೆಗೆಯಿರಿ.





ನಿಮಗೆ ವಸ್ತುಗಳ ನಿರೀಕ್ಷಣೆ ಮಾಡಿ ಅದರಲ್ಲಿಯ ಭೌಮಿತಿಕ ಆಕಾರ ಗುರುತಿಸಲು ಬರುತ್ತದೆ. ಈಗ ನಿಮಗೆ ವಸ್ತುಚಿತ್ರ, ಸಹಜವಾಗಿ ತೆಗೆಯಲು (ಬರುವುದು) ಬರಬಹುದು.

- ವಸ್ತು ಹಾಗೂ ಅದರಲ್ಲಿಯ ಭೌಮಿತಿಕ ಆಕಾರ ಗುರುತಿಸುವ ಸಲುವಾಗಿ ಪ್ರಶ್ನೆಗಳನ್ನು ಕೇಳಬೇಕು.

CG – ೧
C – ೧.೧
LO–೦೩AE೦೧

## ವಸ್ತುಗಳ ಚಿತ್ರ ತೆಗೆಯೋಣ

ಮುಂದೆ ಇದಲಾದ ಎರಡು ವಸ್ತುಗಳ ವಸ್ತುಚಿತ್ರ ಮುಂದಿನ ಹಂತಗಳಿಂದ ತೆಗೆಯೋಣ.

೧) ಮೊದಲು ವಸ್ತುಗಳ ನಿರೀಕ್ಷಣೆ ಮಾಡಿರಿ.

೨) ಮೊದಲಿಗೆ ಆ ವಸ್ತುಗಳಲ್ಲಿ ಅಡಗಿದ ಭೌಮಿತಿಕ ಆಕಾರ ಹುಡುಕಿರಿ.

೩) ಆ ಎರಡು ವಸ್ತುಗಳಲ್ಲಿ (ಒಂದಕ್ಕೊಂದರಲ್ಲಿ)ರುವ ಆಕಾರ ಮಾನಗಳಲ್ಲಿಯ ವ್ಯತ್ಯಾಸ ಹಾಗೂ ಪ್ರಮಾಣ ಗಮನಕ್ಕೆ ತೆಗೆದುಕೊಳ್ಳು.

೪) ವಸ್ತುಗಳ ಬಾಹ್ಯ ಆಕಾರಗಳ ಭೌಮಿತಿಕ ಆಕಾರಗಳಲ್ಲಿ ರೇಖಾಟನೆ ಮಾಡಿರಿ.

೫) ವಸ್ತುಗಳ ವೈಶಿಷ್ಟ್ಯಗಳನುಸಾರ ರೇಷೆಗಳ ಸಹಾಯದಿಂದ ಆ ಆಕಾರಗಳಿಗೆ ಯೋಗ್ಯ ಆಕಾರ ಕೊಟ್ಟು ರೇಖಾಟನೆ ಪೂರ್ಣ ಮಾಡಿರಿ.

೬) ವಸ್ತುಗಳಲ್ಲಿಯ ಸೂಕ್ಷ್ಮತೆಯನ್ನು ರೇಖಾಟನೆ ಮಾಡಿರಿ.

೭) ತಯಾರಾದ ರೇಖಾಟನೆ ನಿಮಗೆ ಇಷ್ಟವಾಗುವ ಬಣ್ಣದ ಮಾಧ್ಯಮದಿಂದ ತುಂಬಿ ಪೂರ್ಣ ಮಾಡಿರಿ. ಉದಾ: ಬಣ್ಣದ ಖಡು, ಎಣ್ಣೆಯ ಖಡು, ಜಲರಂಗ ಇತ್ಯಾದಿ.



### ಮುದ್ರೆ ಇಟ್ಟು ವಸ್ತುಚಿತ್ರ ಬಣ್ಣಿಸೋಣ

ನೀವು ವಸ್ತು ಚಿತ್ರ ತೆಗೆದು ತುಂಬ ಸುಂದರವಾಗಿ ಬಣ್ಣ ತುಂಬಿದ್ದಿರಿ. ಆದರೆ ನಿಮಗೆ ಗುರುತಿದೆಯಾ ನಮಗೆ ವಸ್ತುಚಿತ್ರ ಮುದ್ರೆಯ ಸಹಾಯದಿಂದಲು ಕೂಡಾ ಬಣ್ಣ ಕೊಟ್ಟು ಪೂರ್ಣ ಮಾಡಲು ಬರುವುದು? ಮೊದಲು ನಾವು ನಕ್ಷೆಕೆಲಸದ ಸಲುವಾಗಿ ವಿವಿಧ ಮುದ್ರೆಗಳನ್ನು ತೆಗೆದುಕೊಂಡಿದ್ದೆವೆ ಅದು ನೆನಪಿಗೆ ಬರುತಿದೆ ಅಲ್ಲಾ! ಹಾಗಿದ್ದರೆ ನಡೆಯಿರಿ ಮುದ್ರೆಗಳ ಉಪಯೋಗ ಮಾಡಿ ಚಿತ್ರ ಬಣ್ಣ ತುಂಬೋಣ.

೧) ನಿಮ್ಮ ವರ್ಗದಲ್ಲಿಯ ಯಾವುದಾದರೊಂದು ವಸ್ತುವಿನ ರೇಖಾಚಿತ್ರ ತೆಗೆಯಿರಿ. ಉದಾ. ಕೈಚೀಲ, ಡಬ್ಬಿ, ಪುಸ್ತಕ, ಪೆನ್ನು ಹೀಗೆ ಯಾವುದಾದರೂ.

೨) ಆ ವಸ್ತುಗಳ ಬಣ್ಣಕ್ಕನುಸರಿಸಿ ಮುದ್ರೆ ತೆಗೆದುಕೊಳ್ಳುವ ಸಲುವಾಗಿ ಜಲರಂಗದ ಆಯ್ಕೆ ಮಾಡಿರಿ.

೩) ಆಯ್ಕೆ ಮಾಡಿದ ವಸ್ತು ಚಿತ್ರಗಳಿಗೆ ಬಣ್ಣ ತುಂಬುವ ಸಲುವಾಗಿ ಯಾವುದರ ಮುದ್ರೆಗಳನ್ನು ಉಪಯೋಗಿಸುವವರಿದ್ದಿರಿ ಎಂಬುದನ್ನು ನಿಶ್ಚಯಿಸಿರಿ. ಬೆರಳುಗಳ ಮುದ್ರೆ, ಬೆಂಡೆಕಾಯಿಯ ಮುದ್ರೆ, ಈರುಳ್ಳಿಯ ಮುದ್ರೆ, ಎಲೆಗಳ ಮುದ್ರೆ ಇತ್ಯಾದಿ.

- ಮುದ್ರೆ ಕೆಲಸದ ಸಂಕಲ್ಪನೆ ತಿಳಿಸಿಕೊಡುವುದು ಹಾಗೂ ಅದರ ಉಪಯೋಗ ಮಾಡಿ ವಸ್ತು ರೇಖಾಟನೆಯ ಮೇಲೆ ಮುದ್ರೆ ತೆಗೆದುಕೊಳ್ಳುವ ಪ್ರಾತ್ಯೇಕ್ಷಿಕೆ ಮಾಡಿ ತೋರಿಸುವುದು.

CG – ೨,೩
C – ೨.೨, ೩.೧
LO-೦೩AE೧೧, ೧೭

೪) ಆಯ್ಕೆ ಮಾಡಿದ ಸಾಹಿತ್ಯಗಳ ಉಪಯೋಗ ಮಾಡಿ ಬೇರೆ ಬೇರೆ ಬಣ್ಣ ಸಂಗತಿಗಳ ಸಹಾಯದಿಂದ ಮುದ್ರಿತ ಕೆಲಸದಲ್ಲಿಂದ ಚಿತ್ರ ಪೂರ್ಣಗೊಳಿಸಿರಿ.

೫) ನಿಮ್ಮ ಚಿತ್ರ ಇತರರಿಗೆ ತೋರಿಸಿ ನಿಮಗೆ ಬಂದ ಅನುಭವಗಳ ವರ್ಣನೆ ಮಾಡಿರಿ.

### ಕೋಲಾಜದ ಮಾಧ್ಯಮದಿಂದ ವಸ್ತುಚಿತ್ರ

ಮುದ್ರಿತ ಕೆಲಸದಲ್ಲಿ ನೀವು ವಸ್ತುಚಿತ್ರವನ್ನು ಸುಂದರವಾಗಿ ಬಣ್ಣ ತುಂಬಿದ್ದೀರಿ. ಈಗ ವಸ್ತುಚಿತ್ರ ಬಣ್ಣ ಕೊಡಲು ಇನ್ನೂ ಒಂದು ಪದ್ಧತಿ ನಾವು ತಿಳಿದುಕೊಳ್ಳುವವರಿದ್ದೇವೆ ಅದು ಯಾವುದೆಂದರೆ ಕೋಲಾಜ. ನಕ್ಷೆಕೆಲಸದಲ್ಲಿಯು ಕೂಡಾ ನಾವು ಕೋಲಾಜ ಮಾಡಿದೇವು.

ಕೋಲಾಜ ಕೆಲಸದಿಂದ ವಸ್ತುಚಿತ್ರ ತಯಾರಿಸುವ ಸಲುವಾಗಿ ಮುಂದಿನ ಹಂತಗಳ ಉಪಯೋಗ ಮಾಡಿರಿ.



೧) ಆಯ್ಕೆ ಮಾಡಿದ ವಸ್ತುಗಳ ಕಾಗದಕ್ಕೆ ಶೋಭಿಸುವ ಹಾಗೆ ದೊಡ್ಡ ಆಕಾರದಲ್ಲಿ ರೇಖಾಟನೆ ಮಾಡಿರಿ.

೨) ವಸ್ತುವಿನ ಬಣ್ಣಕ್ಕನುಸರಿಸಿ ಅಂಟಿಸಲು ಸಲುವಾಗಿ ಬಣ್ಣದ ಕಾಗದ ಹಾಗೂ ಅಂಟು ಇಂತಹ ಸಾಹಿತ್ಯಗಳನ್ನು ಒಟ್ಟುಗೂಡಿಸಿರಿ.

೩) ವಸ್ತುಗಳ ಬಣ್ಣಕ್ಕನುಸರಿಸಿ ಬಣ್ಣದ ಕಾಗದಗಳನ್ನು ಕೈಯಿಂದ ತುಂಡು ಮಾಡಿರಿ.

೪) ತಯಾರಿಸಲಾದ ತುಂಡುಗಳನ್ನು ವಸ್ತುಗಳ ಮೇಲೆ ಕಾಣಿಸುವ ಬಣ್ಣಕ್ಕನುಸರಿಸಿ ವಸ್ತುಗಳ ರೇಖಾಟನೆಯ ಮೇಲೆ ಅಂಟಿಸಿ ಕೋಲಾಜ ಮಾಧ್ಯಮದ ಮೂಲಕ ಚಿತ್ರ ಪೂರ್ಣ ಮಾಡಿರಿ.

## ನನ್ನ ಕೃತಿ

- ಮನೆಯಲ್ಲಿಯ ಎರಡು ವಸ್ತು ಒಂದರ ಬದಿಗೆ ಒಂದು ಇಟ್ಟು ಅದರ ಪ್ರಮಾಣಬದ್ಧ ವಸ್ತು ಚಿತ್ರ ತೆಗೆದು ಬಣ್ಣ ತುಂಬಿರಿ.
- ನಿಮಗೆ ಇಷ್ಟವಾಗುವ ವಸ್ತುಗಳ ಚಿತ್ರ ತೆಗೆದು ಅದನ್ನು ಮುದ್ರಿತ ಕೃತಿಯ ಮೂಲಕ ಬಣ್ಣ ತುಂಬಿರಿ.
- ಒಂದು ವಸ್ತುವಿನ ವಸ್ತುಚಿತ್ರ ತೆಗೆದು ಅದನ್ನು ಕೋಲಾಜ ಪದ್ಧತಿಯಿಂದ ಪೂರ್ಣ ಗೊಳಿಸಿರಿ.

- ಕೋಲಾಜದ ಸಂಕಲ್ಪನೆ ತಿಳಿಸಿ ಹೇಳಬೇಕು. ಕೋಲಾಜದ ನಮೂನೆಯನ್ನು ತೋರಿಸಿ ಅಂಟಿಸುವ ಕೃತಿಯ ಮೂಲಕ ವಸ್ತುಚಿತ್ರ ತಯಾರಿಸಲು ಪ್ರೋತ್ಸಾಹಿಸಬೇಕು.

CG – ೩
C – ೩.೧
LO– ೦೩.AE೧೮

# ೫. ತ್ರಿಮಿತಿಯ ಕಲಾಕೃತಿ

ಕಳಿಗಿನ ಎರಡು ಫೋಟೋಗಳನ್ನು ನೋಡಿರಿ. ಇದರಲ್ಲಿ ನಿಮಗೆ ಯಾವ-ಯಾವ ವ್ಯತ್ಯಾಸ ಕಾಣಿಸುವುದು ಅದರ ಮೇಲೆ ಚರ್ಚೆ ಮಾಡಿರಿ.

೧. 

೨. 

ಚಿತ್ರಗಳಲ್ಲಿ ಎರಡು ಬದಿಗಳಿರುತ್ತವೆ. ಉದ್ದ ಹಾಗೂ ಅಗಲ, ಎರಡು ಬದಿಗಳಿರುವ ಕಲಾಕೃತಿಗಳಿಗೆ ದ್ವಿಮಿತಿ ಕಲಾಕೃತಿ ಎನ್ನುತ್ತಾರೆ. ನೀವು ತೆಗೆದ ಚಿತ್ರವು ದ್ವಿಮಿತ ಕಲಾಕೃತಿಯಾಗಿದೆ. ಈಗ ನಮಗೆ ತ್ರಿಮಿತ ಕಲಾಕೃತಿ ತಯಾರಿಸುವುದಿದೆ. ತ್ರಿಮಿತಿ ಎಂದರೆ ಮೂರು ಭುಜ (ಬದಿ), ಉದ್ದ ಹಾಗೂ ದಪ್ಪಳತೆ. ತ್ರಿಮಿತಿ ಕಲಾಕೃತಿಗೆ 'ಶಿಲ್ಪ' ಕೂಡಾ ಎನ್ನುವರು.

## ನೈಸರ್ಗಿಕ ಘಟಕಗಳಿಂದ ತ್ರಿಮಿತಿ ಕಲಾಕೃತಿ (ಶಿಲ್ಪ)

ಕುದುರೆಯ ಚಿತ್ರ ನೋಡಿ ಅದು ಯಾವುದರಿಂದ ತಯಾರಾಗಿದೆ ಆ ಘಟಕದ ಹೆಸರುಗಳನ್ನು ಬರೆ.






........................ ........................ ........................ ........................

ಈ ರೀತಿ ನಾವು ಬೇರೆ ಬೇರೆ ನೈಸರ್ಗಿಕ ಘಟಕಗಳಿಂದ ತ್ರಿಮಿತಿ ರಚನೆ (ಶಿಲ್ಪ) ತಯಾರಿಸಬಹುದು. ಉದಾ: ಕಾಗದ, ಮುತ್ತು, ಕಟ್ಟಿಗೆ ಈ ಘಟಕಗಳಿಗೆ 'ಮಾಧ್ಯಮ' ಎಂದು ಕರೆಯುತ್ತಾರೆ.

ಈ ಮಾಧ್ಯಮಗಳ ಹೊರತಾಗಿ ನಮ್ಮ ಪರಿಸರದಲ್ಲಿ ಇನ್ನೂ ಯಾವ ಮಾಧ್ಯಮಗಳಿಂದ ತ್ರಿಮಿತಿ ರಚನೆ (ಶಿಲ್ಪ) ತಯಾರಿಸಲು ಬರಬಹುದು ಎಂಬುದರ ಪಟ್ಟಿ ಮಾಡಿರಿ.

.................. .................. ..................

.................. .................. ..................

.................. .................. ..................

- ಪರಿಸರದಲ್ಲಿ ಉಪಲಬ್ಧ ಮಾಧ್ಯಮಗಳು ಹಾಗೂ ಸಾಧನಗಳ ಸಂಕಲನ ಮಾಡಿಕೊಳ್ಳುವುದು.
- ಸಂಗ್ರಹಿಸಿದ ಸಾಹಿತ್ಯಗಳ ಉಪಯೋಗ ಮಾಡಿ ತ್ರಿಮಿತಿ ರಚನೆಯ ನಿರ್ಮಿತಿಯ ಪ್ರಾತ್ಯೇಕ್ಷಿಕ ಮಾಡಿ ತೋರಿಸಬೇಕು.
- ಸಂಗ್ರಹಿಸಿದ ಸಾಹಿತ್ಯಗಳಿಂದ ತ್ರಿಮಿತಿ ರಚನೆ ಮಾಡಲು ಹೇಳಿ ಕಲಾಕೃತಿಗಳ ವರ್ಣನೆ ಮಾಡಲು ಪ್ರೋತ್ಸಾಹಿತ ಮಾಡುವುದು.

CG – ೩
C – ೩.೧
LO– ೦೩AE೧೯

ತಯಾರಿಸಿದ ಪಟ್ಟಿಯಲ್ಲಿಯ ಮಾಧ್ಯಮದಲ್ಲಿಂದ ಯಾವ ತ್ರಿಮಿತಿ ಕಲಾಕೃತಿ ತಯಾರಿಸಲು ಬರುವುದೆಂಬುದನ್ನು ಬರೆಯಿರಿ.

| ಮಾಧ್ಯಮ | ಕಲಾಕೃತಿಯ ಹೆಸರು |
|---|---|
| .................. | .................. |
| .................. | .................. |
| .................. | .................. |
| .................. | .................. |
| .................. | .................. |

**ಗಾಡಿ ತಯಾರಿಸೋಣ.**

ನಿಮ್ಮ ಪರಿಸರದಲ್ಲಿ ಉಪಲಬ್ಧವಿರುವ ಮಾಧ್ಯಮಗಳಿಂದ ನಿಮ್ಮ ಇಷ್ಟದ ಪ್ರಕಾರ ಒಂದು ಗಾಡಿಯ ತ್ರಿಮಿತಿ ಶಿಲ್ಪ ತಯಾರಿಸಿರಿ.

**ಎರಡು ಮಾಧ್ಯಮಗಳ ಸಹಾಯದಿಂದ ತ್ರಿಮಿತಿ ರಚನೆ**

ತಯಾರಿಸಿದ ತ್ರಿಮಿತಿ ಶಿಲ್ಪ ಹಾಗೂ ಅದನ್ನು ತಯಾರಿಸುವಾಗ ಬಂದಿರುವ ಅನುಭವ ಈ ವಿಷಯದ ಬಗ್ಗೆ ವರ್ಗದಲ್ಲಿ ಚರ್ಚಿಸಿರಿ. ಈಗ ನಾವು ಒಂದರ ಬದಲಾಗಿ ಎರಡು ಮಾಧ್ಯಮಗಳ ಉಪಯೋಗ ಮಾಡಿ ತ್ರಿಮಿತಿ ರಚನೆ (ಶಿಲ್ಪ) ತಯಾರಿಸೋಣ.

- ಇದರ ಸಲುವಾಗಿ ನಿಮ್ಮ ಪರಿಸರದಲ್ಲಿ ಉಪಲಬ್ಧವಿರುವ ಪರ್ಯಾವರಣ ಪೂರಕ ಯಾವುದೇ ಎರಡು ಮಾಧ್ಯಮಗಳನ್ನು ಆಯ್ಕೆ ಮಾಡಿರಿ.
- ಆ ಎರಡು ಮಾಧ್ಯಮಗಳಿಂದ ಸುಂದರವಾದ ಮನೆಯ ಪ್ರತಿಕೃತಿ ತಯಾರಿಸಿರಿ.
- ತಯಾರಿಸಿದ ಮನೆಯ ಪ್ರತಿಕೃತಿ ತ್ರಿಮಿತಿ ರಚನೆ (ಶಿಲ್ಪ) ನಿಮ್ಮ ವರ್ಗ ಮಿತ್ರರಿಗೆ ಹಾಗೂ ಶಿಕ್ಷಕರಿಗೆ ತೋರಿಸಿರಿ.

## ನನ್ನ ಕೃತಿ

**ಗಮನದಲ್ಲಿಡಿರಿ :**

ಪರ್ಯಾವರಣ ಪೂರಕ ಮಾಧ್ಯಮಗಳು ಎಂದರೆ ಇಂತಹ ಒಂದು ಮಾಧ್ಯಮವಾಗಿದೆ ಯಾವುದರ ಮೂಲಕ ಪರ್ಯಾವರಣ ದೂಷಿತವಾಗುವುದಿಲ್ಲ, ಪರ್ಯಾವರಣಕ್ಕೆ ಹಾನಿ ಉಂಟಾಗುವುದಿಲ್ಲ.

- ನಿಮ್ಮ ಪರಿಸರದಲ್ಲಿ ಉಪಲಬ್ಧ ಮಾಧ್ಯಮಗಳಿಂದ ಪ್ರಾಣಿ ಅಥವಾ ಪಕ್ಷಿಗಳ ಪ್ರತಿಕೃತಿ ಎಂದರೇನೆ ತ್ರಿಮಿತಿ ಶಿಲ್ಪ ತಯಾರಿಸಿರಿ.
- ನಿಮ್ಮ ಶಾಲೆಯಲ್ಲಿ ಗುಂಪುಗಳಲ್ಲಿ ಒಂದು ಶಿಲ್ಪ ಪರ್ಯಾವರಣ ಪೂರಕ ವಸ್ತು/ಘಟಕಗಳ ಮಾಧ್ಯಮದಿಂದ ತಯಾರಿಸಿರಿ. ಉದಾ. ಕೋಟೆ, ಯಂತಮಾನವ ಇತ್ಯಾದಿ.

- ಪರಿಸರದಲ್ಲಿ ಉಪಲಬ್ಧ ಮಾಧ್ಯಮಗಳು ಹಾಗೂ ಸಾಧನಗಳ ಸಂಗ್ರಹ ಮಾಡಿಕೊಳ್ಳಿರಿ.
- ಸಂಗ್ರಹಿಸಿದ ಸಾಹಿತ್ಯಗಳ ಉಪಯೋಗ ಮಾಡಿ ತ್ರಿಮಿತಿ ರಚನೆ ನಿರ್ಮಿತಿಯ ಪ್ರಾತ್ಯಕ್ಷಿಕ ಮಾಡಿ ತೋರಿಸಬೇಕು.
- ಸಂಗ್ರಹಿಸಿದ ಸಾಹಿತ್ಯಗಳಿಂದ ತ್ರಿಮಿತಿ ರಚನೆ ಮಾಡಲು ಹೇಳಿ ಕಲಾಕೃತಿಗಳ ವರ್ಣನೆ ಮಾಡಲು ಪ್ರೋತ್ಸಾಹಿರಬೇಕು.

CG – ೩
C – ೩.೧
LO– ೦೩AE೧೯, ೨೦, ೧೭


ರಂಗ ಮಂಚ



# ೬. ನಡೆಯಿರಿ ಅಭಿನಯ ಮಾಡೋಣ.



ನಿಸರ್ಗದಲ್ಲಿ ಅನೇಕ ಪ್ರಕಾರದ ಪ್ರಾಣಿ-ಪಕ್ಷಿ ಕಂಡು ಬರುತ್ತದೆ. ಪ್ರತಿಯೊಂದು ಪ್ರಾಣಿ ಮತ್ತು ಪಕ್ಷಿ ಇವುಗಳ ಧ್ವನಿ ಬೇರೆ ಇರುತ್ತವೆ. ಅವುಗಳ ಚಲನವಲನೆಯು ಕೂಡಾ ಬೇರೆ ಬೇರೆ ಇರುತ್ತವೆ. ನಿಮಗೆ ಕೆಲವು ಪಶುಪಕ್ಷಿಗಳ ಧ್ವನಿ ತೆಗೆಯಲು ಬರುತ್ತದೆಯೇ?

**ಮೋಜಿನ ಆಟ ಆಡೋಣವೇ.**

**ಕೆಳಗಿನ ಚಿತ್ರಗಳಲ್ಲಿಯ ಪಶುಪಕ್ಷಿಗಳ ಧ್ವನಿಯ ನಕಲು ಮಾಡಿರಿ.**



**ಗುರುತಿಸಿ ನೋಡೋಣ ಯಾರೆಂಬುದು?**

ಈ ಆಟದಲ್ಲಿ ನಾವು ನಮ್ಮ ಪರಿಸರದಲ್ಲಿಯ ಪ್ರಾಣಿ ಹಾಗೂ ಪಕ್ಷಿ ಇವುಗಳ ಧ್ವನಿಗಳ ನಕಲು ಮಾಡುವವರಿದ್ದೆವೆ. ಆ ಧ್ವನಿ ಯಾರದಿದೇ ಎಂಬುದನ್ನು ಗುರುತಿಸುವವರಿದ್ದೆವೆ. ಇದರ ಸಲುವಾಗಿ ನಿಮಗೆ (ಗುರುತಿರುವ) ಪರಿಚಯವಿರುವ ಪ್ರಾಣಿ-ಪಕ್ಷಿಗಳ ಧ್ವನಿ ತೆಗೆಯಿರಿ.

ಈಗ ವರ್ಗದಲ್ಲಿಯ ಎಲ್ಲರೂ ಗೋಲಾಕಾರದಲ್ಲಿ ಕುಳಿತುಕೊಳ್ಳಿ. ನಿಮ್ಮಲ್ಲಿರುವ ಒಬ್ಬನು ಯಾವುದಾದರೊಂದು ಪ್ರಾಣಿಯ ಅಥವಾ ಪಕ್ಷಿಗಳ ಧ್ವನಿ ತೆಗೆಯಿರಿ. ಉಳಿದವರು ಆ ಪ್ರಾಣಿ ಅಥವಾ ಪಕ್ಷಿ ಯಾವುದಿದೆ ಎಂಬುದು ಗುರುತಿಸಿರಿ. ಯಾರು ಸರಿಯಾಗಿ ಉತ್ತರಿಸುವಿರಿ ಅವರಿಗೆ ಮುಂದಿನ ಧ್ವನಿ ತೆಗೆಯಲು ಅವಕಾಶ ಕೊಡಿರಿ.

ಈಗ ನಾವು ಚಿತ್ರದಲ್ಲಿಯ ಪಶುಪಕ್ಷಿಗಳ ಚಲನವಲನೆಯ ನಕಲು ಮಾಡೋಣ.



- ವಿವಿಧ ಪ್ರಾಣಿಪಕ್ಷಿ ಇವುಗಳ ಚಿತ್ರಗಳನ್ನು ತೋರಿಸಿ ಅವುಗಳ ಧ್ವನಿಗಳ ಹಾಗು ಚಲನವಲನೆಯ ನಕಲು (ಮಾಡುವ) ಮಾಡಲು ಅವಕಾಶ ಮಾಡಿಕೊಡಿರಿ.
- ಪ್ರತಿಯೊಬ್ಬ ವಿದ್ಯಾರ್ಥಿ ಸಹಭಾಗಿಯಾಗುವರು ಎಂಬುದನ್ನು ಖಚಿತಗೊಳಿಸಿರಿ.
- ಕೊಟ್ಟ ಆಟ ಪ್ರತ್ಯೇಕ್ಷವಾಗಿ ಆಡಲು ಅವಕಾಶ ಕೊಡಿರಿ.

CG - ೪,೧
C - ೧.೧
Lo - ೦೩.AE೨೬
೦೩.AE೨೭

## ವಸ್ತುಗಳ ಧ್ವನಿಗಳ ಮೋಜು!

ನಾವು ಬೇರೆ ಬೇರೆ ಪಕ್ಷಿಗಳ, ಪ್ರಾಣಿಗಳ ಧ್ವನಿ ತೆಗೆದೇವು ಮತ್ತು ಗುರುತಿಸಿದೇವು ಕೂಡಾ. ಪ್ರತಿಯೊಂದು ವಸ್ತುವಿನ ಧ್ವನಿ ಬೇರೆ ಇರುತ್ತದೆ. ಈಗ ಇಂತಹ ಇನ್ನೂ ಯಾವ ವಸ್ತುಗಳ ಧ್ವನಿ ನೀವು ಕೇಳಿರುವಿರಿ ಅವುಗಳ ಪಟ್ಟಿ ತಯಾರಿಸಿರಿ.

.................... .................... ....................

.................... .................... ....................

.................... .................... ....................

.................... .................... ....................

## ಧ್ವನಿಗಳ ಆಟ:

ಒಬ್ಬ ವಿದ್ಯಾರ್ಥಿಯ ಕಣ್ಣು ಕೈವಸ್ತ್ರದಿಂದ ಮುಚ್ಚಿರಿ. ವರ್ಗದಲ್ಲಿಯ ಯಾವುದೊಂದು ವಸ್ತು ಬಾರಿಸಿರಿ. (ಉದಾ. ಕಂಪಾಸ ತೆಗೆಯುವುದು, ಬಾಗಿಲು ತೆರೆಯುವುದು.) ಕಣ್ಣು ಮುಚ್ಚಿರುವ ವಿದ್ಯಾರ್ಥಿಯು ಆ ಧ್ವನಿ ಯಾವುದರದಿದೆ ಎಂಬುದನ್ನು ಗುರುತಿಸಬೇಕು. ಒಂದು ವೇಳೆ ಅವನಿಗೆ ಧ್ವನಿ ಗುರುತಿಸಲು ಬಂದರೆ ಮುಂದಿನ ವಿದ್ಯಾರ್ಥಿಗೆ ಕಣ್ಣು ಮುಚ್ಚಿಸಿ ಧ್ವನಿ ಗುರುತಿಸಲು ಅವಕಾಶ ಕೊಡಬೇಕು. ಆದರೆ ಎರಡು ಸಲ ಅವನಿಗೆ ಅವಕಾಶ ಕೊಡಲಾಗಿ ಅವನು ಧ್ವನಿಯನ್ನು ಗುರುತಿಸಲಿಲ್ಲ ಆಗ ಅವನಿಗೆ ಯಾವುದಾದರೊಂದು ಪ್ರಾಣಿ/ಪಕ್ಷಿ ಇವುಗಳ ಧ್ವನಿಯ ಅಥವಾ ಚಲನವಲನೆಯ ನಕಲು ಮಾಡಲು ಹೇಳುವುದು.



- ಕೊಟ್ಟ ಕ್ಯೂ.ಆರ್ ಕೊಡದಲ್ಲಿಯ ಧ್ವನಿ ವಿದ್ಯಾರ್ಥಿಯು ಸರಿಯಾಗಿ ಗುರುತಿಸುತ್ತಿದ್ದಾನೆ ಎಂಬುದನ್ನು ಖಚಿತಪಡಿಸಿಕೊಳ್ಳುವುದು.
- ವಿದ್ಯಾರ್ಥಿಗಳಿಗೆ ವಿವಿಧ ವಸ್ತುಗಳ ಧ್ವನಿ ಮಾಡಲು ಹೇಳಿ ಅಭ್ಯಾಸ ಮಾಡಿಸಿಕೊಳ್ಳಿರಿ.
- ವಿವಿಧ ವಸ್ತುಗಳ ಧ್ವನಿ ನೆನಪಿಸಿಕೊಂಡು ಅವುಗಳ ಪಟ್ಟಿ ಮಾಡಲು ಹೇಳುವುದು.
- ಧ್ವನಿಯ ಆಟ ತೆಗೆದುಕೊಳ್ಳುವಾಗ ಪ್ರತಿಯೊಬ್ಬ ವಿದ್ಯಾರ್ಥಿಗೆ ಅವಕಾಶ ದೊರೆಯುವುದರ ಬಗ್ಗೆ ಖಚಿತಪಡಿಸಿಕೊಳ್ಳಬೇಕು.

CG - ೧
C- ೧.೨
Lo- ೦೩AE೨೮

## ವ್ಯಕ್ತಿಗಳ ನಕಲು ಮಾಡೋಣ

ನಮ್ಮ ಮನೆಯಲ್ಲಿ, ಸುತ್ತಮುತ್ತಲು (ವಿವಿಧ) ಬೇರೆ ಬೇರೆ ವಯಸ್ಸಿನ ವ್ಯಕ್ತಿಗಳಿರುತ್ತಾರೆ. ಈ ವ್ಯಕ್ತಿಗಳ ಧ್ವನಿ ಹಾಗೂ ಚಲನೆವಲನೆಯ ನಕಲು ನಾವು ಮಾಡಿ ನೋಡೋಣ.

ಉದಾ.






ಇದೇ ರೀತಿ ನಮ್ಮ ಪರಿಸರದಲ್ಲಿಯ ವ್ಯವಸಾಯಿಕ ಹಾಗೂ (ಇತರ) ಬೇರೆ ವ್ಯಕ್ತಿಗಳ ನಕಲು ಮಾಡಿ ನೋಡೋಣ.

**ಗಮನದಲ್ಲಿಡಿರಿ.**

ನಕಲು ಮಾಡಲು ಬರುವುದು ಇದು ಕೂಡಾ ಒಂದು ಕೌಶಲ್ಯವಿದೆ, ಆದರೆ ಈ ನಕಲು ಇತರರಿಗೆ ಅಣಿಕಿಸಲು ಮಾಡಬಾರದು.

## ನಾಟ್ಯ ಪ್ರಸಂಗ ಅಭ್ಯಾಸ

ನಾವು ಪ್ರಾಣಿಗಳ, ಪಕ್ಷಿಗಳ, ವಸ್ತುಗಳ ಧ್ವನಿಗಳ ನಕಲು ಮಾಡಿದೇವು. ಕೆಲವು ಜನರ ಧ್ವನಿಯ, ಚಲನೆವಲನೆಯ ನಕಲು ಮಾಡಿದೇವು. ಅದರ ಉಪಯೋಗ ಮಾಡಿ ನಾವು ಕೆಲವು ಸಣ್ಣ ಪ್ರಸಂಗ ಸಾದರಪಡಿಸಿ ನೋಡೋಣ.

ಕೆಳಗಿನ ಕೆಲವು ಪ್ರಸಂಗದಲ್ಲಿಯ ಸಂವಾದ ಓದಿ ಅದರ ಮೇಲೆ (ಸಣ್ಣ) ಕಿರುನಾಟಕ ಪ್ರಸಂಗ ಸಾದರ ಪಡಿಸೋಣ.

**ಪ್ರಸಂಗ – ೧. ಮುಂಜಾನೆ ಆಯಿತು.**

(ಪಾತ್ರಗಳು: ಗುಬ್ಬಿ, ಕಾಗೆ, ಕೋಳಿ, ಅಮ್ಮ ಮತ್ತು ಒಬ್ಬ ಮಲಗಿರುವ ಮಗು)

ಈ ಪಾತ್ರಗಳ ಭೂಮಿಕೆ ಗುಂಪಿನಲ್ಲಿ ಹಂಚಿಕೊಳ್ಳಿ ಮತ್ತು ಕೆಳಗಿನ ಸಂವಾದದ ಮೇಲೆ ಅಭಿನಯ ಮಾಡಿರಿ.

ಕೋಳಿ: ಕುಕೂಚಕೂ... ಕುಕೂಚಕೂ... ಏಳಿರಿ, ಎದ್ದೇಳಿರಿ. ಬೆಳಗಾಯಿತು?

ಗುಬ್ಬಿ : ಚಿವ್... ಚಿವ್... ಚಿವ್... ನೋಡಿರಿ ನೋಡಿರಿ, ಸೂರ್ಯ ಅಣ್ಣಾ ಮೇಲೆ ಬಂದನು!

ಕಾಗೆ : ಕಾವ್... ಕಾವ್... ಕಾವ್... ನಡೆಯಿರಿ, ನಡೆಯಿರಿ, ಕೆಲಸಕ್ಕೆ ಹತ್ತಿರಿ.

ಅಮ್ಮ : ಮನು, ಏಳು ಮಗು. ನಿನ್ನ ಗೆಳೆಯರು ಆಗಲೇ ಎದ್ದರು ನೀನು ಯಾವಾಗ ಏಳುವಿ?

ಮಗು : ಹೌದಲ್ಲ, ಅಮ್ಮ... ಎಷ್ಟು ಸುಂದರ ಧ್ವನಿಗಳಿವೆ ಇವರದ್ದು, ನಡೆ, ನಾನು ಕೂಡಾ ಏಳುತ್ತೇನೆ.
ಈಗ ಶಾಲೆಯ ತಯಾರಿ ಮಾಡುವಾ. ಲಾಲಾಲಾಲಾಲಾ... ಲಾಲಾಲಾಲಾಲಾ...

- ಬೇರೆ ಬೇರೆ ಧ್ವನಿಗಳ ನಕಲು ಮಾಡಿಸಿ ಅವು ಯಾವಾಗ ಹಾಗೂ ಯಾರ ಸಲುವಾಗಿ ಉಪಯೋಗಿಸಲು ಬರುತ್ತದೆ ಎಂಬುದನ್ನು ಕೇಳುವುದು.
- ಕುಟುಂಬದಲ್ಲಿಯ ಹಾಗೂ ಪರಿಸರದಲ್ಲಿಯ ವ್ಯಕ್ತಿಗಳ ಚಲನೆವಲನೆಯ ನಕಲು ಮಾಡಲು ಅವಕಾಶ ಕೊಡಬೇಕು.
- ನಾಟ್ಯಪ್ರಸಂಗದ ಸಾದರಿಕರಣ ಮಾಡುವಾಗ ಪ್ರಾರಂಭದಲ್ಲಿ ವಾಚಿಕ ಅಭಿನಯ ಮಾಡಿಸಿಕೊಳ್ಳುವುದು ಹಾಗೂ ನಂತರ ಪ್ರಸಂಗಗಳ ಸಾದರಿಕರಣ ಮಾಡಿಸಿಕೊಳ್ಳುವುದು.

CG- ೧
C- ೧.೧
Lo- ೦೩AE ೨೬

ಏನು ಎಲ್ಲರಿಗೂ ಮೋಜು ಬಂತಾ? ಈಗ ಇನ್ನೂ ಕೆಲವು ಪ್ರಸಂಗ ಕೊಡಲಾಗಿದೆ. ಇದನ್ನು ಗುಂಪಿನಲ್ಲಿ ಸಾದರಿಕರಣ ಮಾಡಿರಿ.

**ಪ್ರಸಂಗ - ೨: ಅಡುಗೆ ಮನೆಯಲ್ಲಿಯ ಗಡಿಬಿಡಿ.**

(ಪಾತ್ರಗಳು: ಕುಕರ, ನಳ, ತಟ್ಟೆ ಮತ್ತು ಅಮ್ಮ)

ನಳ: ಟಪ್... ಟಪ... ಟಪ... ನನಗೆ ಯಾರಾದರೂ ಸರಿಯಾಗಿ ಬಂದ ಮಾಡಿರಿ!

ಕುಕರ: ಶsssss... ಶsssss... ಪಲ್ಯೆ ಕುದಿಯಿತು ಬಂದ ಮಾಡೀರಿ?

ತಟ್ಟೆ: ಖಣsss... ಅಯ್ಯೋ! ಅಮ್ಮ, ಒಡೆಯಿತು ನನಗೆ!

ಅಮ್ಮ: ಅಯ್ಯೋ ದೇವರೇ, ಎಷ್ಟು ಹರಡಿದಿರಾ! ಈ ತಟ್ಟೆ ಹೇಗೆ ಕೆಳಗೆ ಬಿದ್ದಿತು, ಆಶ್ಚರ್ಯವಾಯಿತಲ್ಲ! ಮೊದಲು ಕುಕರಿನ ಗ್ಯಾಸ್ ಬಂದ ಮಾಡುವೆ. ಅರೇ ಈ ನಳ ಕೂಡಾ ಚಾಲು ಇದೆಯೊ? ತಡಿ ಎಷ್ಟಾ, ನಿನಗು ಬಂದ ಮಾಡುವೆ ನೀನು ಟಪಟಪ ಮಾಡಬೇಡ. ಹಂ ಈಗ ಸ್ವಲ್ಪ ಅಡಿಗೆ ಮನೆಯಲ್ಲಿ ಚೆನ್ನಾಗಿ ಕಾಣಿಸುತ್ತಿದೆ ಹುಷ್.....

**ಪ್ರಸಂಗ - ೩. ಕಾಟು-ಕೂಟು (ಅಳಗಿಸು) ಬೇಡ.**

(ಪಾತ್ರಗಳು : ಪೆನ್ಸಿಲ್, ಅಳತೆ ಪಟ್ಟಿ, ರಬ್ಬರ, ರಫಿಕ್)

ಪೆನ್ಸಿಲ್ - ಖರ್.. ಖರ್.. ಖರ್.. ಏ ರಫಿಕ್ ಸ್ವಲ್ಪ ಸರಿಯಾಗಿ ಬರೆಯುವೆಯಾ.

ರಫಿಕ - ಏನಾಯಿತು, ನೋವಾಯಿತೆ! ನಾನು ಹೀಗೆ ಬರೆಯುವೆನು.

ರಬ್ಬರ - ಕೆಡಿಸು... ಕೆಡಿಸು... ಕೆಡಿಸು... ಅವನು ಹೀಗೆ ಇದ್ದಾನೆ ಚೆನ್ನಾಗಿ ಬರೆಯೋದಿಲ್ಲ ಮತ್ತು ಯಾವಾಗಲೂ ನನ್ನನ್ನು ಉಪಯೋಗಿಸುವನು.

ಪೆನ್ಸಿಲ್ - ಮತ್ತು ನನ್ನನ್ನು ತೆಗೆದುಕೊಂಡು (ಪುನಃ) ಮತ್ತೆ ಬರೆಯುತ್ತಾನೆ.

ಅಳತೆಪಟ್ಟಿ - ನನ್ನ ಉಪಯೋಗ ರೇಷೆ ಹೊಡೆಯಲು ಕಡಿಮೆ. ಮತ್ತು ಜಗಳವಾಡಲು ಹೆಚ್ಚು ಮಾಡುವನು.

ರಫಿಕ - ಸರಿ ಗೆಳೆಯರೆ, ಈಗ ನಾನು ಸರಿಯಾಗಿ, ಸಾವಕಾಶವಾಗಿ, ಸುಂದರವಾಗಿ ಬರೆಯುತ್ತೇನೆ ಆಯಿತಾ?

ನಿಮ್ಮ ಇನ್ನಿತರ ಪಠ್ಯಪುಸ್ತಕದಲ್ಲಿಯ ಅಥವಾ ಕಥೆಯ ಪುಸ್ತಕದಲ್ಲಿಯ ಇಂತಹ ಇನ್ನೂ ಕೆಲವು ಸಣ್ಣ ಪ್ರಸಂಗ ಹುಡುಕಿ ಅದರ ಮೇಲೆ ಗುಂಪಿನಲ್ಲಿ ಸಾದರಿಕರಣ ನಿಮ್ಮ ಗುಂಪಿನ ಸಾದರಿಕರಣ ಮಾಡುವಾಗ ಇನ್ನಿ ಇತರ ವರ್ಗ ಮಿತ್ರರು ಹಾಗೂ ಶಿಕ್ಷಕರು ಕೊಟ್ಟಂತಹ ಸೂಚನೆಗಳ ವಿಚಾರ ಮಾಡಿ ಪುನಃ ಸಾದರಿಕರಣ ಮಾಡಿರಿ.

- ಇನ್ನಿತರ ಪಠ್ಯಪುಸ್ತಕ ಅಥವಾ ಕಥೆಯ ಪುಸ್ತಕದಲ್ಲಿಯ ಪ್ರಸಂಗ ಆಯ್ಕೆ ಮಾಡಿ ಸಾದರಿಕರಣದ ಅಭ್ಯಾಸ ಮಾಡಲು ಕೊಡಬೇಕು. ಹಾಗೆಯೇ ವಿದ್ಯಾರ್ಥಿಗಳಿಗೆ ಪ್ರಸಂಗ ತಯಾರಿಸಿ ಕೊಟ್ಟು ಸಾದರಿಕರಣ ಮಾಡಲು ಅವಕಾಶ ಕೊಡಬೇಕು.
- ಪ್ರಸಂಗ ಸಾದರಿಕರಣದ ನಿರೀಕ್ಷಣೆ ಮಾಡಿ ಸೂಚನೆ ಕೊಡಬೇಕು ಹಾಗೂ ಅದರ ಅನುಸಾರ ಪ್ರಸಃ ಸಾದರಿಕರಣ ಮಾಡಿಸಿಕೊಳ್ಳಬೇಕು

CG - ೧,೩
C - ೧.೧, ೩.೨
LO೦೩AE೨೬,೩೬

**ಮುಂದಿನ ಚಿತ್ರಗಳನ್ನು ನೋಡಿ ಋತುಗಳ ಹೆಸರುಗಳನ್ನು ಗುರುತಿಸಿ ಹಾಗೂ ಬರೆಯಿರಿ.**



..................................................



..................................................



..................................................

ಕೆಳಗೆ ಕೆಲವು ಚಿತ್ರಗಳನ್ನು ಕೊಡಲಾಗಿದೆ. ಆ ಚಿತ್ರಗಳನ್ನು ನೋಡಿ ನಾವು ಯಾವ ಋತುವಿನಲ್ಲಿ ಯಾವ ಉಡುಪು ಉಪಯೋಗಿಸಬೇಕು ಅವುಗಳನ್ನು ರೇಷೆಯ ಮೂಲಕ ಜೋಡಿಸಿ. ಹೊಂದಿಸಿರಿ.



ಮಳೆಗಾಲ | ಚಳಿಗಾಲ | ಬೇಸಿಗೆಗಾಲ

ಬೇರೆ ಬೇರೆ ಋತುಗಳಲ್ಲಿ ಉಪಯೋಗಿಸಲಾಗುವ ಉಡುಪುಗಳ ಬಗ್ಗೆ ಚರ್ಚೆ ಮಾಡಿರಿ.

- ಮೂರು ಋತುಗಳ ವೈಶಿಷ್ಟ್ಯಗಳನ್ನು ಹಾಗೂ ಅವುಗಳಲ್ಲಿ ಉಪಯೋಗಿಸಲಾಗುವ ಬಟ್ಟೆ ಈ ವಿಷಯದ ಮೇಲೆ ಚರ್ಚೆ ಮಾಡಲು ಹೇಳುವುದು.

CG -೪
C - ೪.೧
LO೦೩AE೪೦

ಪ್ರಸಂಗ ಒಂದು - ಋತು ಅನೇಕ

**ಪ್ರಸಂಗ** - ಶಾಲೆಯ ತಯಾರಿ ಮಾಡಿ ಬೆಳಿಗ್ಗೆ ಶಾಲೆಗೆ ಕಾಲ್ನಡಿಗೆಯಿಂದ ಹೋಗುವ ರಾಜು. ಈ ಪ್ರಸಂಗ ಒಂದೇ ಇದ್ದರು ಕೂಡಾ ಅದು ಈಗ ಬೇರೆ ಬೇರೆ ಋತುಗಳಲ್ಲಿ ಹೇಗೆ ಸಂಭವಿಸುತ್ತದೆ ಎಂಬುದನ್ನು ಅಭಿನಯನದ ಮೂಲಕ ತೋರಿಸುವುದಿದೆ.



ಮೇಲಿನ ಪ್ರಸಂಗ ಒಂದೇ ಇದ್ದರು ಕೂಡಾ ಅದು ಬೇರೆ ಬೇರೆ ಋತುಗಳಲ್ಲಿ ಹೇಗೆ ಸಂಭವಿಸುವುದೆಂಬುದನ್ನು ಅಭಿನಯದ ಮೂಲಕ ತೋರಿಸಿರಿ.

## ನನ್ನ ಕೃತಿ

೧. ಮುಂಜಾನೆಯಿಂದ ರಾತ್ರಿಯ ವರೆಗೆ ಮನೆಯಲ್ಲಿ ಕೇಳಲು ಬರುವ ಐದು ಬೇರೆ ಬೇರೆ ಧ್ವನಿಗಳ ಅಭ್ಯಾಸ ಮಾಡಿಸಿ ವರ್ಗದಲ್ಲಿ ಗೆಳೆಯರಿಗೆ ಕೇಳಿಸಿರಿ. (ಉದಾ. ಸಾಯಕಲಿನ ಘಂಟೆ, ಮಿಕ್ಸರದ ಧ್ವನಿ, ಕುಕರಿನ ಸಿಟಿ.)

೨. ಬಿಸಾಡುವ ವಸ್ತುಗಳ ಉಪಯೋಗ ಮಾಡಿ ಒಂದು ವಾದ್ಯ ತಯಾರಿಸಿರಿ. ಉದಾ. ಒಂದು ಪ್ಲಾಸ್ಟಿಕದ ಬಾಟಲಿಯಲ್ಲಿಸ್ವಲ್ಪ ಕಲ್ಲು ಅಥವಾ ಮಣಿ ತುಂಬಿರಿ. ಬಾಟಲಿ ಅಲುಗಾಡಿಸಿದಾಗ (ಆಗುವ) ಬರುವ ಧ್ವನಿಯನ್ನು ಅನುಭವಿಸಿರಿ. 'ಶೇಕರ' ವಾದ್ಯ ತಯಾರಾಗುವುದು.

೩. ಕೆಳಗಿನ ಪಾತ್ರಗಳ ನಡೆಯುವುದರ ನಕಲು ಮಾಡಿರಿ.

೧) ದರ್ಪದಿಂದ ನಡೆಯುವ ಸಿಂಹ    ೨) ಅಂಜಿರುವ ಇಲಿ

೩) ಆಟ ಆಡಿ ದಣಿದ ಬಾಲಕ    ೪) ಮೋಣಕಾಲೂರಿ ನಡೆಯುವ ಮಗು.

೪. ಪ್ರತಿಯೊಂದು ವೇಶಭೂಷಣವನ್ನು ಉಪಯೋಗಿಸಿ ಈ ಪ್ರಸಂಗಗಳನ್ನು ಗುಂಪಿನಲ್ಲಿ ಸಾದರಿಕರಣ ಮಾಡಿರಿ.

೧) ಬೇಸಿಗೆಗಾಲ - ಮಧ್ಯಾನ್ಹದ ಸುಡು ಬಿಸಿಲಿನಲ್ಲಿ ಕಾಯಿಪಲ್ಲೆಯ ಕೈಚೀಲ ಹಿಡಿದುಕೊಂಡು ಮನೆಗೆ ಬರುವುದು.

೨) ಮಳೆಗಾಲ - ಮಳೆಯಲ್ಲಿ ಬಸ್ಸಿನ ದಾರಿ ಕಾಯುತ ಗಿಡದ ಕೆಳಗೆ ನಿಲ್ಲುವುದು.

೩) ಚಳಿಗಾಲ - ರಸ್ತೆಯ ಬದಿಯಲ್ಲಿ ಕುಳಿತ ನಾಯಿ ಮರಿಯನ್ನು ಮನೆಗೆ (ತಂದೇವು) ತರುವುದು.

- ಕೃತಿ ಹಾಗೂ ಹಾವಭಾವ ಇವುಗಳ ಸಾಮರಸ್ಯ ಸಾಧಿಸುತಿರುವುದನ್ನು ಖಚಿತ ಪಡಿಸುವುದು.
- ಮಕ್ಕಳಿಗೆ ಭಾವನೆ ಮತ್ತು ಹಾವಭಾವ ವ್ಯಕ್ತ ಪಡಿಸುವುದರ ಮೇಲೆ ಹೆಚ್ಚು ಒತ್ತು ಕೊಡಲು ಹೇಳುವುದು. ಅವರ ಮುಖದ ಮೇಲಿನ ಹಾವಭಾವ ಸಂವಾದದ ಹಾಗೆ ಯೋಗ್ಯವಾಗುತ್ತಿದೆಯೇ ಎಂಬುದನ್ನು ನೋಡಿ ಮಾರ್ಗದರ್ಶನ ಮಾಡುವುದು.

CG -೪
C - ೪.೧
LO೩AE೪೦

# ೨. ನಾಟಕದ ತಯಾರಿ ಮಾಡೋಣ

ನಾಟಕದ ತಯಾರಿ ಪ್ರಾರಂಭ ಮಾಡುವ ಸಲುವಾಗಿ ಎಲ್ಲಕ್ಕಿಂತ ಮೊದಲು ಬೇಕಾಗುವುದು ಒಂದು ಕಥೆ ಅಥವಾ ಪ್ರಸಂಗ, ಅದಕ್ಕೆ ನಾವು 'ಸ್ಟೋರಿ' (ಕಥೆ) ಎನ್ನುತ್ತೆವೆ. ತದನಂತರ ಅದರ ಸಲುವಾಗಿ ಬೇಕಾಗುವ ಸಾಹಿತ್ಯ ಹಾಗೂ ಉಡುಪು (ಬಟ್ಟೆ) ಇವುಗಳ ವಿಚಾರ ಮಾಡುತ್ತೆವೆ. ಪ್ರಸಂಗ ಸಾದರಪಡಿಸುವಾಗ ಅದು ಇನ್ನು ಸುಂದರವಾಗಿ ಕಾಣಿಸಬೇಕು ಹಾಗೂ ನಿಜವಿದ್ದಂತೆ ಎಣಿಸಬೇಕು ಎಂಬುದರ ಸಲುವಾಗಿ ಅಭಿನಯ ಸುಂದರವಾಗಿರಬೇಕೆ ಅದರ ಜೊತೆಗೆ ಅದರ ಸಲುವಾಗಿ ಬೇಕಾಗುವ ಸಾಹಿತ್ಯ, ವೇಶಭೂಷಣ, ಸಂಗೀತವು ಕೂಡಾ ಮಹತ್ವದಿರುತ್ತವೆ. ಈಗ ನಾವು ಮುಂದಿನ ಪ್ರಸಂಗ ಓದೋಣ.

ರಾಜು ಶಾಲೆಯಿಂದ ಓಡುತ ಮನೆಗೆ ಬಂದನು ಹಾಗೂ ಅವನು ಕೈಚೀಲ ಇಟ್ಟನು, ಊಟದ ಡಬ್ಬಿಯ ಕೈಚೀಲವಂತು ಬಿಸಾಡಿದಾ. ಕಾರಣ ಇಂದು ಅವನ ಕ್ರಿಕೆಟಿನ ಮ್ಯಾಚ್ ಇತ್ತು. ಮನೆಯಲ್ಲಿ ಇಟ್ಟಂತಹ ಬ್ಯಾಟ್ ಹಾಗೂ ಟೊಪ್ಪಿಗೆ ಅವನು ಕೈಯಲ್ಲಿ ತೆಗೆದುಕೊಂಡನು ಮತ್ತು ಅಕ್ಕನಿಗೆ ಹೇಳಿದಾ, ''ನಾನು ಹೊರಟೆ'', ಇದಕ್ಕೆ ಅವನ ಅಕ್ಕ ಹೊರಗೆ ಬಂದು ಹೇಳಿದಳು, ''ಈಗ ತಾನೆ ನೀನು ಮನೆಯಲ್ಲಿ ಬಂದಿದಿಯಾ ಮತ್ತೆ ಇಷ್ಟು ಬೇಗ ಎಲ್ಲಿಗೆ ಹೊರಟೆ?'' ಇದಕ್ಕೆ ರಾಜು ಹೇಳಿದಾ, ''ನಮ್ಮ ಕ್ರಿಕೆಟ್ ಮ್ಯಾಚ್ ಇದೆ. ನನಗೆ ಈ ನೀರಿನ ಬಾಟಲಿ ತುಂಬಿ ಕೊಡುತಿಯಾ?'' ಅಕ್ಕ ಹೇಳಿದಳು, ''ಹೊರಗೆ ಮಳೆಯ ಬರುವ ಹಾಗೆ ಆಗಿದೆ. ನೋಡು ಎಷ್ಟು ಕತ್ತಲಾಗಿದೆ. ನೀನು ಮನೆಯಲ್ಲಿಯೇ ಇರು ಇಲ್ಲದಿದ್ದರೆ ಅಮ್ಮ ಬಂದ ಮೇಲೆ ಬೈಯುತ್ತಾಳೆ''. ರಾಜು ಅಂದನು, ''ನಮ್ಮ ಮ್ಯಾಚ್ ಮೊದಲೇ ನಿರ್ಧರಿಸಲ್ಪಟ್ಟಿದೆ. ಮಳೆ ತದನಂತರ ಬಂದಿದೆ. ನಾವು ಇದರ ಸಲುವಾಗಿ ನಮ್ಮ ಮ್ಯಾಚ್ ರದ್ದು ಪಡಿಸಲಾಗುವುದಿಲ್ಲ.'' ಅವಳಿಗೆ ನಗಬೇಕೋ, ಬೈಬೇಕೋ ಅನ್ನೋದೆ ತಿಳಿಯಲಿಲ್ಲ, ಆಗ ಅವಳು ಹೇಳಿದಳು ಸರಿಯಾಗಿದೆ ಆದರೆ ಶಾಲೆಗೆ ಸಮ-ವಸ್ತ್ರವಾದರು ಬದಲಾಯಿಸು ಮತ್ತು ಟಿ-ಶರ್ಟ್ ಹಾಕಿಕೊಂಡು

ಹಾಗೆ, ಈ ಛತ್ರಿ ತೆಗೆದುಕೊಳ್ಳು ಮಳೆ ಬಂದರೆ ಬೇಕಾಗುವುದು: ''ಅಯ್ಯೋ, ಅಕ್ಕ ನಾನು ಬ್ಯಾಟಿಂಗ್ ಮಾಡುವಾಗ ಬ್ಯಾಟ್‌ನ್ನು ಬಿಟ್ಟು ಛತ್ರಿಯಿಂದ ಬಾಲ ಹೊಡೆಯಲೆ? ಏನು ಅಕ್ಕಾ ನೀನು...'' ''ನೋಡು, ನಿನಗೆ ಛತ್ರಿ ತೆಗೆದುಕೊಂಡು ಹೋಗಬೇಕಾಗಿದೆ'' ಅಕ್ಕ ಕೋಪಾದಿಂದ ಹೇಳಿದಳು. ಅಷ್ಟರಲ್ಲಿ ಮಳೆ ಬಿಳುವ ಧ್ವನಿ ಬರಲು ಪ್ರಾರಂಭವಾಯಿತು. ಆಗ ಅಕ್ಕ ಹೇಳಿದಳು'' ''ನೋಡು, ಮಳೆ ಪ್ರಾರಂಭವಾಯಿತು, ಈಗ ಅದು ನಿಲ್ಲುವ ವರೆಗೆ ಏನಾದರೂ ತಿಂದು ಹೋಗು ಆಗ ನಿನಗೆ ಆಡಲು ಶಕ್ತಿ ಕೂಡಾ (ಬರುವುದು). ದೊರೆಯುವುದು.''

ಈ ಪ್ರಸಂಗವನ್ನು ನೀವು ಗಮನ ಕೊಟ್ಟು ಓದಿರಬಹುದು. ಈಗ ಈ ಪ್ರಸಂಗ ಸಾದರ ಪಡಿಸುವ (ಮುಂಚೆ) ಮುನ್ನ ಕೆಲವು ಪೂರ್ವ ತಯಾರಿ ಮಾಡೋಣ.

★ **ಪ್ರಸಂಗ ಸಾದರ ಪಡಿಸುವ ಸಲುವಾಗಿ ಬೇಕಾಗುವ ಸಾಹಿತ್ಯಗಳ ಪಟ್ಟಿ ಮಾಡೋಣ.**

.............................. .............................. ..............................

.............................. .............................. ..............................

.............................. .............................. ..............................

ಈ ಸಾಹಿತ್ಯ ನಮ್ಮ ಪರಿಸರದಲ್ಲಿ ಉಪಲಬ್ಧ ವಾಗುತ್ತಿದ್ದರೆ ಅವುಗಳನ್ನು ಒಟ್ಟು ಗೂಡಿಸಿ ಅಭ್ಯಾಸ ಮಾಡಿರಿ.

- ಪ್ರಸಂಗದ ಯೋಗ್ಯ ಧ್ವನಿಯ ಏರಿಳಿತದೊಂದಿಗೆ ವಾಚನ ಮಾಡಿಸಿ ಕೊಳ್ಳಬೇಕು.
- ಪ್ರಸಂಗಾನುರೂಪ ಅವಶ್ಯಕ ಸಾಹಿತ್ಯಗಳ ಯಾದಿ ತಯಾರಿಸಿಕೊಳ್ಳಬೇಕು.

CG- ೨
C- ೨.೧
Lo-೦೩.AE೨೮

## ಪರ್ಯಾಯ ಸಾಹಿತ್ಯಗಳ ಉಪಯೋಗ.

ಕೆಲವು ಸಾಹಿತ್ಯಗಳು ನಮ್ಮ ಶಾಲೆ ಹಾಗೂ ಪರಿಸರದಲ್ಲಿ ಉಪಲಬ್ಧವಾಗದಿದ್ದರು ಅದರ ಸಲುವಾಗಿ ಪರ್ಯಾಯಿ ಸಾಹಿತ್ಯಗಳ ಉಪಯೋಗ ಮಾಡಿರಿ. ಈ ಕೆಳಗಿನಂತೆ.









ಈ ರೀತಿಯಾಗಿ ಒಂದೇ ವಸ್ತುವನ್ನು ಕಲ್ಪನೆಯಿಂದ ಬೇರೆ ಬೇರೆ ಪ್ರಕಾರಗಳಲ್ಲಿ ಉಪಯೋಗಿಸಲು ಬರುತ್ತದೆ.

## ಸಾಹಿತ್ಯ ನಿರ್ಮಿತಿ

ಕೆಲವು ಸಮಯದಲ್ಲಿ ನಮ್ಮ ಪರಿಸರದಲ್ಲಿ ಉಪಲಬ್ಧವಿರುವ ವಸ್ತುಗಳಲ್ಲಿ ಸ್ವಲ್ಪ ಬದಲಾವಣೆ ಮಾಡಿ ಉಪಯೋಗ ಸಾಹಿತ್ಯಗಳ ನಿರ್ಮಿತಿ ಮಾಡಲು ಬರುತ್ತದೆ.

### ಖುರ್ಚಿಯಿಂದ ಸಿಂಹಾಸನ




- ಮಕ್ಕಳಿಗೆ ಪರಿಚಿತ ವಸ್ತು ತೋರಿಸಿ ಆ ವಸ್ತುಗಳನ್ನು ಕಲ್ಪಕತೆಯಿಂದ ಸಾದರಿಕರಣದಲ್ಲಿ ಹೇಗೆ ಉಪಯೋಗ ಮಾಡಲು ಬರುವುದು ಎಂಬುದನ್ನು ಕೃತಿ ಮಾಡಿಸಿಕೊಳ್ಳುವುದು.

CG- ೨,೩
C- ೨.೧, ೩.೧
Lo-೦೩AE೩೦
೦೩AE೩೪

ಇಂತಹ ಪರ್ಯಾಯಿ ಅಥವಾ ತಯಾರ ಸಾಧನಗಳ ಉಪಯೋಗ ಮಾಡಿ ಕೊಟ್ಟ ಪ್ರಸಂಗಗಳ ಸಾದರಿಕರಣದ ಅಭ್ಯಾಸ ಮಾಡಿರಿ. ನಿಮ್ಮ ಇನ್ನಿತರ ಗುಂಪಿನಲ್ಲಿಯ ಗೆಳೆಯರಿಗೆ ಹಾಗೂ ಶಿಕ್ಷಕರಿಗೆ ತೋರಿಸಿರಿ. ಶಿಕ್ಷಕರು ಹಾಗೂ ಗೆಳೆಯರು ಸೂಚಿಸಿದ ಸುಧಾರಣೆಗಳನ್ನು ಕೇಳಿ ಸಾದರಿಕರಣದಲ್ಲಿ ಅವಶ್ಯಕವಿರುವ ಬದಲಾವಣೆ ಮಾಡಿ ಪುನಃ ಹೊಸದಾಗಿ ಸಾದರಿಕರಣ ಮಾಡಿರಿ.

## ವೇಶಭೂಷೆ:

ವೇಶಭೂಷೆ ಎಂದರೆ ಪೋಶಾಖ (ಬಟ್ಟೆ). ಹಿಂದಿನ ಪ್ರಸಂಗದಲ್ಲಿ ರಾಜು ಹಾಗೂ ಅವನ ಅಕ್ಕ ಇವರು ಈ ಪ್ರಸಂಗ ಸಾದರ ಪಡಿಸುವ ಸಲುವಾಗಿ ಅವರು ಯಾವ ಬಟ್ಟೆ (ಪೋಶಾಖ) ಧರಿಸಬೇಕು ಎಂಬುದರ ಯಾದಿ ಮಾಡೋಣ.

| ರಾಜು | ಅಕ್ಕ |
|---|---|
| .............................. | .............................. |
| .............................. | .............................. |
| .............................. | .............................. |
| .............................. | .............................. |
| .............................. | .............................. |

- ಒಬ್ಬರಿಗೊಬ್ಬರ ಸಹಕಾರ್ಯದಿಂದ ಈ ವೇಶಭೂಷೆ ಒಟ್ಟುಗೂಡಿಸಿರಿ.
- ವೇಶಭೂಷೆ ಧರಿಸಿ ಅಭ್ಯಾಸ ಮಾಡಿರಿ.
- ನಿಮ್ಮ ಇನ್ನಿತರ ಗೆಳೆಯರಿಗೆ ಈ ಅಭ್ಯಾಸ ತೋರಿಸಿರಿ ಹಾಗೂ ಅವರಿಗೆ ಯಾವ ಒಳ್ಳೆಯ ಬದಲಾವಣೆ ಸೂಚಿಸಿದರೆ ಅಂತರ ಬದಲಾವಣೆ ಮಾಡಿ ಪುನಃ ಸಾದರಿಕರಣ ಮಾಡಿರಿ.

## ನಡೆಯಿರಿ ಆಟ ಆಡೋಣ: ಮಳೆ ಚಪ್ಪಾಳೆಯ

ಒಬ್ಬರು ಗುಂಪಿನ ಮುಂದೆ ನಿಂತು, ಬೆರಳಿನಿಂದ ಸಂಖ್ಯೆಗಳನ್ನು ಗುರುತಿನ ಮೂಲಕ ತೋರಿಸಲು ಹೇಳುವುದು.

ಇನ್ನಿತರ ಮಕ್ಕಳು ಒಂದು ಬೆರಳಿನ ಚಪ್ಪಾಳೆ, ನಂತರ ಎರಡು ಬೆರಳಿನಿಂದ, ಹೀಗೆ ಸಾವಕಾಶವಾಗಿ ಬೆರಳುಗಳ ಸಂಖ್ಯೆ ಹೆಚ್ಚಿಸಿ ಎರಡು ಕೈಗಳಿಂದ ಚಪ್ಪಾಳೆ ತಟ್ಟುತ ಇರುವರು. ಚಪ್ಪಾಳೆಯ ಧ್ವನಿ ಮಳೆಯ ಹಾಗೆ ಹೆಚ್ಚುವ ಹಾಗೆ ಕೇಳಿಬರುವುದು.

ಮತ್ತೆ ಈಗ ಪುನಃ ವಿರುದ್ಧವಾಗಿ, ಬೆರಳುಗಳನ್ನು ಕಡಿಮೆ ಮಾಡುತ ಕೊನೆಯಲ್ಲಿ ಪುನಃ ಒಂದು ಬೆರಳಿನ ಚಪ್ಪಾಳೆ ತಟ್ಟೋಣ ಎಂದರೆ ಮಳೆ ಕಡಿಮೆ ಆಗಿ ನಿಂತತೆ ಎನಿಸುವುದು. ಈ ಆಟದ ಶೋಭೆ ಹೆಚ್ಚಿಸುವ ಸುವಾಗಿ ಸೂಚನೆಯ ಪ್ರಕಾರ ಬೆರಳುಗಳು ಸಂಖ್ಯೆ ಹೆಚ್ಚು ಕಡಿಮೆ ಮಾಡಬೇಕು.

**ಈ ಆಟದ ಉಪಯೋಗ ರಾಜು ಹಾಗೂ ಅಕ್ಕಳ ಪ್ರಸಂಗದ ಸಮಯದಲ್ಲಿ ಮಳೆಯ ಧ್ವನಿ ತೆಗೆಯುವ ಸಲುವಾಗಿ ಮಾಡಿರಿ.**

- ಮಕ್ಕಳ ಕಲ್ಪಕತೆಗೆ ಚಾಲನೆ ದೊರೆಯುವ ಸಲುವಾಗಿ ವಿವಿಧ ಪ್ರಸಂಗ, ಕಥೆಗಳ ವಾಚನ ಹಾಗೂ ಸಾದರಿಕರಣ ಮಾಡಿಸಿಕೊಳ್ಳಬೇಕು. ಇದರ ಸಲುವಾಗಿ ಅವಶ್ಯಕ ವೇಶಭೂಷಣ. ಆಯ್ಕೆ ಮಾಡುವ ಅವಕಾಶ ಕೊಡಬೇಕು.
- ಮಳೆಯ ಚಪ್ಪಾಳೆ ಈ ಕೃತಿಯ ಸಲುವಾಗಿ ನಡುನಡುವೆ ಹೆಚ್ಚು ಕಡಿಮೆ ಬೆರಳುಗಳನ್ನು ತೋರಿಸಿರಿ ಹಾಗೂ ಮಳೆಯ ಬದಲಾಗುವ ಧ್ವನಿಯ ಅನುಭವ ಕೊಡಿರಿ.

CG- ೨
C- ೨.೧
Lo-೦೩AE೩.೨
೦೩AE೩.೩
೦೩AE೩.೬
೦೩AE೩.೭

## ನನ್ನ ಕೃತಿ

೧. ಸ್ವಲ್ಪ ಯೋಚನೆ ಮಾಡಿರಿ ಹಾಗೂ ಈ ಕಂಪಾಸ ಪೆಟ್ಟಿಗೆಯ ಉಪಯೋಗ ವಸ್ತು ಎಂದು ಎಲ್ಲೆಲ್ಲಿ ಉಪಯೋಗ ಮಾಡಬಹುದು ಎಂಬುದು ಹೇಳಿರಿ.



೨. ನಿಮ್ಮ ಇಯತ್ತೆಯಲ್ಲಿಯ ಗದ್ಯದಲ್ಲಿಯ ಅಥವಾ ಇತರ ವಿಷಯಗಳ ಪಠ್ಯಪುಸ್ತಕದಲ್ಲಿಯ ಅಥವಾ ಕಥೆಯ ಪುಸ್ತಕದಲ್ಲಿಯ ಒಂದು ಪ್ರಸಂಗ ಆಯ್ಕೆ ಮಾಡಿರಿ. ಆಯ್ಕೆ ಮಾಡಿದ ಪ್ರಸಂಗದ ಸಾದರೀಕರಣ ಮಾಡುವ ಸಲುವಾಗಿ ಕೆಳಗಿನ ಘಟಕಗಳ ವಿಚಾರ ಮಾಡಿರಿ.

- ಪಾತ್ರಗಳ ಆಯ್ಕೆ
- ಸಾಹಿತ್ಯಗಳ ಆಯ್ಕೆ
- ವೇಶಭೂಷಣದ ಆಯ್ಕೆ
- ವರ್ಗ ನಾಟ್ಯಗೃಹದ ರಚನೆ
- ಸಾದರೀಕರಣ

- ಮಕ್ಕಳ ಸಹಭಾಗಕ್ಕೆ ಹಾಗೂ ಕಲ್ಪಕತೆಗೆ ಚಾಲನೆ ದೊರೆಯಬೇಕು.
- ಪ್ರಸಂಗ ಸಾದರ ಪಡಿಸುವಾಗ ಯೋಗ್ಯ ಮಾರ್ಗದರ್ಶನ ಮಾಡಬೇಕು.

CG- ೨
C- ೨.೧
Lo-೦೩AE೩೨
೦೩AE೩೩
೦೩AE೩೬
೦೩AE೩೭

# ೮. ನಡೆಯಿರಿ ರಂಗಪಂಚದ ಮೇಲೆ

ಇಲ್ಲಿಯ ವರೆಗೆ ನಾವು ನಾಟಕದ ಎಲ್ಲ ಪೂರ್ವತಯಾರಿ ಮಾಡಿದೇವು. ಆದರೆ ಈ ನಾಟಕ ಎಲ್ಲಿ ಸಾದರ ಪಡಿಸುವುದು ಎಂಬ ಪ್ರಶ್ನೆ ನಿಮಗೂ (ಕಾಡುತ್ತಿರಬಹುದು) ಕೂಡಾ ಅನಿಸಿರಬಹುದು. ಹೀಗೆಯೇ ಒಂದು ವರ್ಗದಲ್ಲಿ ಈ ರೀತಿ ಘಟಿಸಿತು ಅದನ್ನು ಮುಂದಿನ ಪ್ರಸಂಗದ ಮೂಲಕ ನೋಡೋಣ.

**ಪ್ರಾಚಿ** ಸರ್ ನಾಟಕದ ಎಲ್ಲ ತಯಾರಿಯಾಗಿದೆ. ಆದರೆ ನಾಟಕ ಎಲ್ಲಿ ಸಾದರಪಡಿಸುವದು?

**ಶಿಕ್ಷಕ** ಏಕೆ, ಏನಾಗಿದೆ?

**ಬಾನಾ** ಶಾಲೆಯ ಸಭಾಗೃಹದಲ್ಲಿ ಪಾಲಕಸಭೆಯ ತಯಾರಿ ನಡೆದಿದೆ. ಮತ್ತು ಮೈದಾನದ ಮೇಲಿನ ಸ್ಟೇಜು ಬಿಸಿಲಿನಿಂದ ಕಾದಿದೆ, ಕಾಲು ಸುಡುತ್ತವೆ.

**ಶಿಕ್ಷಕ** ಹಾಗಿದ್ದರೆ, ನಮ್ಮ ವರ್ಗದಲ್ಲೇ ನಾಟಕ ಸಾದರ ಪಡಿಸೋಣ, ಕಾರಣ ನಮ್ಮ ವಿದ್ಯಾರ್ಥಿ ಮಿತ್ರರು ನಮ್ಮ ಪ್ರೇಕ್ಷಕರಿದ್ದಾರೆ. ಅವರು ಈ ವರ್ಗದಲ್ಲಿ ಸಹಜವಾಗಿ ಕೂಡಬಹುದು.

**ರಾಜು** ಸರ್, ನಾವು ನಾಟಕವನ್ನು ಫಲಕದ ಎದುರಿಗೆ ಎದ್ದು ನಿಂತು ಮಾಡುವವರಿದ್ದವೆ ಅಲ್ವ?

**ಶಿಕ್ಷಕ** ಹೌದು.

**ರಾಜು** ಹಾಗಾದರೆ ಆ ಫಲಕದ ಮೇಲೆ ನಾಟಕಕ್ಕೆ ಸಂಬಂಧಿಸಿದ ಚಿತ್ರ ತೆಗೆಯೋಣವೆ?

**ಶಿಕ್ಷಕ** ಸರಿ, ತೆಗೆಯಿರಿ. ಆದರೆ ಆ ಟೇಬಲ್ ಸ್ವಲ್ಪ ಬದಿಗೆ ಇಡಿರಿ. ಅಂದರೆ ನಾಟಕ ಸಾದರ ಪಡಿಸಡಿಸಲು ಚೆನ್ನಾಗಿ ಸ್ಥಳ ದೊರೆಯುವುದು.

**ಪ್ರಾಚಿ** ಸರ್, ಈ ಮೇಜುಗಳನ್ನು ಸ್ವಲ್ಪ ಹಿಂದೆ ಸರಿಸೋಣವೆ? ಆಗ ಸಂಗೀತ ಕೊಡುವ ಮಕ್ಕಳು ಇಲ್ಲಿ ಕೂಡಬಹುದು.

**ಶಬಾನಾ** ಹೌದು! ಅವರಿಗೆ ಅವರ ಸಾಹಿತ್ಯ ಇಡಲು ಸ್ಥಳ ಬೇಕಾಗುವುದು!

**ಶಿಕ್ಷಕ** ನಡೆಯುತ್ತದೆ, ಆದರೆ, ನಾಟಕ ನೋಡುವ ನಮ್ಮ ವಿದ್ಯಾರ್ಥಿ ಅವರ ಸ್ಥಳದ ಮೇಲೆ ಕುಳಿತುಕೊಂಡು, ಸಂಪೂರ್ಣ ನಾಟಕ ನೋಡಬಹುದು ಆ ರೀತಿ ಮೇಜುಗಳನ್ನು ಇಡಬೇಕಾಗುವುದು.

**ಜಾನ** ಆದರೆ ನಾಟಕದಲ್ಲಿ ಉಪಯೋಗಿಸಲಾದ ಸಾಹಿತ್ಯ ಮುಂದೆ ಮಂಡಣೆ ಮಾಡಿದಾಗ ಎಲ್ಲರಿಗೂ ಮೊದಲೇ ಕಾಣಿಸಬಹುದಲ್ಲವೆ!

**ರಾಜು** ಸರ್ ನಾವು ಅವುಗಳನ್ನು ಹೇಗೆ ಮುಚ್ಚಬಹುದು? ಎಂದರೆ ನಾಟಕ ಪ್ರಾರಂಭವಾಗುವ ಮುಂಚೆ ಯಾರಿಗೂ ಅದು ಕಾಣಿಸಲ್ಲ.

**ಅಕ್ಷರಾ** ಸರ್ ನಮಗೂ ಕೂಡಾ ನಾಟಕದಲ್ಲಿ ಸಹಭಾಗಿ ಮಾಡಿಕೊಳ್ಳಿ.

**ಶಿಕ್ಷಕ** ಅಲ್ಲ ಅಕ್ಷರಾ, ನಿಮ್ಮ ಹಾಗೆ ಇನ್ನೂ ಕೆಲವು ವಿದ್ಯಾರ್ಥಿಗಳು ಕೂಡಾ ನಾಟಕದಲ್ಲಿ ಭಾಗ ತೆಗೆದುಕೊಳ್ಳುವವರಿದ್ದಾರೆ. ನೀವು ಕೂಡಾ ಅವರ ಜೋತೆ ಭಾಗ ತೆಗೆದುಕೊಳ್ಳಿರಿ.

**ಅಕ್ಷರಾ** ಹಾಗಾದರೆ ಸರ್ ನಮ್ಮ ಭೂಮಿಕೆ ಯಾವುದು? ನಾಟಕವು ಅರ್ಧ ಘಂಟೆಯಲ್ಲಿ

- ಕೊಟ್ಟ ಸಂವಾದದ ಮೊದಲು ವಾಚನ ಮಾಡಿಕೊಳ್ಳಬೇಕು ಹಾಗೂ ಪ್ರತಿಯೊಂದು ಪಾತ್ರ ಮಕ್ಕಳಲ್ಲಿ ಹಂಚಿಕೊಟ್ಟು ಸಂವಾದ ಮಾಡಿಸಿಕೊಳ್ಳುವುದು.

CG – ೩
C– ೩.೨
Lo– ೦೩.AE೩೫
೦೩.AE೩೮

|  |  |
|---|---|
|  | ಪ್ರಾರಂಭವಾಗಲಿದೆ ಅಲ್ಲವೆ? ಹಾಗಾದರೆ ನಮ್ಮ ಪ್ರಾಕ್ಟಿಸ್? |
| **ಶಿಕ್ಷಕ** | ನಿಮ್ಮ ರೋಲ್ ಇದೆ, ಪರದೆಯದ್ದು. |
| **ಅಕ್ಷರಾ** | ಏನು! ಪರದೆಯದೆ? |
| **ಶಿಕ್ಷಕ** | ಹೌದು, ಮಕ್ಕಳ ನಾಟಕದ ಪರದೆಯು ಕೂಡಾ ಮಕ್ಕಳದೇ, ಎಂದರೆ ಈಗ ನಮ್ಮ ವರ್ಗದ ತಯಾರಿ ನಾಟ್ಯಗೃಹದಾಗುವುದು. |
| **ಎಲ್ಲರೂ** | ಏನು ನಾಟ್ಯಗೃಹ? |
| **ಶಿಕ್ಷಕ** | ಹೌದು, ಇದಕ್ಕೆ ತಾನೆ "ನಾಟ್ಯಗೃಹ" ಎನ್ನುವರು. |
| **ಶಬಾನಾ** | ಆದರೆ ಸರ್ ನಾಟಕ ಪ್ರಾರಂಭವಾಗುವ ಮುಂಚೆಯೇ ನಮ್ಮ ಸಾಹಿತ್ಯ ಮತ್ತು ಹಿಂದೆ ಅಲಂಕರಿಸಿದ ಫಲಕ ಯಾರಿಗೂ ಕಾಣಿಸಬಾರದು ತಾನೆ! ಅದು ಹೇಗೆ ಮುಚ್ಚುವುದು? |
| **ಶಿಕ್ಷಕ** | ಅದರ ಸಲುವಾಗಿಯೇ ಮಾಡುವದಿದೆ ಈ ಮಕ್ಕಳ ಶರೀರಕೃತಿಯ ಪರದೆ. ರಂಗಮಂಚದ ಮುಂದಿನ ಭಾಗದಲ್ಲಿ ಮಕ್ಕಳನ್ನು ಸಮೀಪ ನಿಲ್ಲಿಸುವುದು. ಎಂದರೆ ಪ್ರೇಕ್ಷಕರಿಗೆ ಹಿಂದಿನ ಭಾಗ ಏನು ಕೂಡಾ ಕಾಣಿಸಲ್ಲ. ನಂತರ ನಾಟಕ ಪ್ರಾರಂಭವಾಗುವ ಮುಂಚೆ ಈ ಮಕ್ಕಳು ಸಾವಕಾಶವಾಗಿ ಎಡಬದಿಗೆ ಹಾಗೂ ಬಲಬದಿಗೆ ಸರಿಯುತ್ತಾರೆ. ಈಗ ಸಾದರಿಕರಣದ ಭಾಗ ಕಾಣುವಂತಾಗುವುದು ಮತ್ತು ನಾಟಕ ಪ್ರಾರಂಭವಾಗುವುದು. |

## ಮನುಷ್ಯರ ಶರೀರಾಕೃತಿಯ ಪರದೆ



ಮುಚ್ಚಿದ ಪರದೆ



ತೆರೆದ ಪರದೆ

- ಸಾದರಕರಣ ಮಾಡುವಾಗ ಸಾಕಾಗುವಷ್ಟು ಸಂಖ್ಯೆಯ ವಿಚಾರ ಮಾಡಿ ಬೇರೆ ಬೇರೆ ಗುಂಪು ಮಾಡಿರಿ.
- ಪ್ರತಿಯೊಬ್ಬರಿಗೂ ಅವಕಾಶ ದೊರೆಯಬೇಕು ಎಂಬುದರ ಕಡೆಗೆ ಗಮನ ಕೊಡಬೇಕು.

CG - ೩
C- ೩.೨
Lo- ೦೩AE೩೫
೦೩AE೩೮

## ಸಂಗೀತದ ಜೊತೆಗೆ

ಯಾವುದೊಂದು ಪ್ರಸಂಗ ಸಾದರಪಡಿಸುವಾಗ ಅದು ಪ್ರೇಕ್ಷಕರಿಗೆ ಇನ್ನೂ ರಂಜಕವಾಗಿ ಕಾಣಿಸಬೇಕು ಎಂಬುದರ ಸಲುವಾಗಿ ಪ್ರಸಂಗ ಸಾದರಪಡಿಸುವಾಗ ಅದಕ್ಕೆ ಸಂಗೀತದ ಮೋಡು ಕೊಡಲು ಬರುತ್ತದೆ. ಈ ಸಂಗೀತವು ಕೂಡಾ ನಮ್ಮ ಪರಿಸರದಲ್ಲಿಯ ಅನೇಕ ವಸ್ತುಗಳಿಂದ ನಿರ್ಮಾಣ ಮಾಡಲು ಬರುತ್ತದೆ.

ಇಂತಹ ಅನೇಕ ವಸ್ತುಗಳಿಂದ ನಾಟಕದ ಸಲುವಾಗಿ ಅವಶ್ಯಕ ಧ್ವನಿ ನಿರ್ಮಾಣ ಮಾಡಿ ಸಂಗೀತ ಕೊಡಬಹುದು.



ನಮ್ಮಲ್ಲಿ ಕೂಡಾ ಸಂಗೀತ ಅಡಗಿದೆ

ಬಾಯಿಯಿಂದ ಬೇರೆ ಬೇರೆ ಧ್ವನಿ ತೆಗೆಯಲು ಬರುತ್ತದೆ

ಕೈಯಿಂದ ಹಾಗೂ ಕಾಲುಗಳ ತಾಳಕ್ಕೆ ಧ್ವನಿ ನಿರ್ಮಾಣ ಮಾಡಲು ಬರುತ್ತದೆ.



ಸಾದರೀಕರಣದ ಸಲುವಾಗಿ ಸಂಗೀತದ ಜೊತೆ ಕೊಡುವ ವಿದ್ಯಾರ್ಥಿ

**ನಿಮಗೆ ಗೊತ್ತಿದೆಯೇ?**

ಭಾರತೀಯ ನಾಟ್ಯ ಶಾಸ್ತ್ರದ ತಳಹದಿ ಭರತ ಮುನಿಯು ರಚಿಸಿದ್ದಾರೆ. ಮರಾಠಿ ರಂಗಭೂಮಿಯ ಇತಿಹಾಸದಲ್ಲಿ ಸಂಗೀತ ಶಕುಂತಲ ಇದು ಮೊದಲನೆಯ ಸಂಗೀತ ನಾಟಕ ಎಂದು ತಿಳಿಯಲಾಗುತ್ತದೆ

### ನಡೆಯಿರಿ ಮಾಡಿ ನೋಡೋಣ.

ವರ್ಗದಲ್ಲಿಯ ವಿದ್ಯಾರ್ಥಿಗಳ ಕೆಲವು ಗುಂಪು ಮಾಡೋಣ.

**ಮೊದಲನೆಯ ಗುಂಪು** ನಮ್ಮ ಪಠ್ಯಪುಸ್ತಕದಲ್ಲಿಯ ಕವಿತೆ/ಪ್ರಸಂಗ ಹಾವಭಾವದಿಂದ ಸಾದರ ಪಡಿಸೋಣ.

**ಎರಡನೆಯ ಗುಂಪು** ಸಾದರಿಕರಣ ನಡೆಯುತ್ತಿರುವಾಗ ಎರಡನೆಯ ಗುಂಪು, ತಾಳ ಅಥವಾ ಉಪಲಬ್ಧ ಸಾಧನಗಳಿಂದ ಲಯ ನಿರ್ಮಾಣ ಮಾಡಬಹುದು.

**ಸಂಗೀತ ಕೊಡುವ ಸಲುವಾಗಿ**

- ಪರಿಸರದಲ್ಲಿ ಉಪಲಬ್ಧವಾಗುವ ಸಾಹಿತ್ಯ ಒಟ್ಟುಗೂಡಿಸಿ ಅವುಗಳ ಸಂಗ್ರಹ ಮಾಡುವುದು.
- ಒಟ್ಟುಗೂಡಿಸಿದ ಸಾಹಿತ್ಯಗಳಿಂದ ಸಂಗೀತ ನಿರ್ಮಾಣ ಮಾಡುವ ಅವಕಾಶ ಕೊಡಬೇಕು.

CG -೩
C-೩.೨
Lo- ೦೩AE೩೭

## ಪ್ರಕಾಶದ ಉಪಯೋಗ ಮಾಡೋಣ.

ನಾವು ಯಾವ ಪ್ರಸಂಗ ಸಾದರ ಪಡಿಸುವವರಿದ್ದೇವೆ ಅದು ಯಾವ ಸಮಯದ್ದಾಗಿದೆ ಎಂಬುದನ್ನು ನೋಡೋಣ. ಎಂದರೆ ಮುಂಜಾನೆ, ಮಧ್ಯಾನ, ರಾತ್ರಿ ಹೀಗೆ ದಿನದ ಯಾವ ಪ್ರಹರದಲ್ಲಿದೆ ಎಂಬುದನ್ನು ಗಮನಕ್ಕೆ ತರೋಣ. ಏಕೆಂದರೆ ಅಂತಹ ಬೆಳಕು ನಮಗೆ ವರ್ಗನಾಟ್ಯಗೃಹದಲ್ಲಿ ಮುಡಿಸಬಹುದಾಗಿದೆ ಹೇಗೆ ಎಂಬುದನ್ನು ನೋಡೋಣ.

ನಮಗೆಲ್ಲರಿಗೂ ಪ್ರಕಾಶ ಕೊಡುವವನು  ನಿದ್ದಾನೆ ಅದರ ಉಪಯೋಗ ನಾವು ಪ್ರಕಾಶ ಯೋಜನೆಯಲ್ಲಿ ಮಾಡಿದರೆ ಎಷ್ಟು ಮೋಜು ಬರುವುದು. ನಮ್ಮ ವರ್ಗಕ್ಕೆ ಇರುತ್ತದೆ  ಮತ್ತು  ಇವುಗಳನ್ನು ಮುಚ್ಚಿ ಕತ್ತಲು ಮಾಡಿದಾಗ ಈಗ  ಆಯಿತು ಈಗ ಸಾವಕಾಶವಾಗಿ ಮುಂಜಾನೆ ಆಗುವುದನ್ನು ತೋರಿಸುವುದಿದ್ದರೆ ತೆಗೆಯಿರಿ ಸಾವಕಾಶವಾಗಿ  ಮತ್ತು  ಆದರೆ ಎಲ್ಲವನ್ನು ತೆಗೆಯಬೇಡಿ. ಏಕೆಂದರೆ ಬೆಳಗೆ ಇರುವುದು ಮಂದ ಪ್ರಕಾಶ, ತದನಂತರ ಮಾಡಿರಿ ಬೇಕಾಗುವಷ್ಟು ಬೆಳಕು ಎಂದರೆ ಆಗುವುದು ಮಧ್ಯಾನ  ಬಂದ ಮೇಲೆ ಕೂಡಾ ಬೆಳಕು ಕಡಿಮೆನೇ ಇರುವುದು. ವರ್ಗದಲ್ಲಿ ಇರುವುದು  ಲಾಯಿಟ ಅಥವಾ  ಇದರ ಉಪಯೋಗ ಕೂಡಾ ಮುಂಜಾನೆ ಮಧ್ಯಾನ ಹಾಗೂ ರಾತ್ರಿ ತೋರಿಸುವಾಗ  ಆನ್, ಆಫ್ ಮಾಡಿ ತೋರಿಸಲು ಬರುವುದು, ಈಗ ಈ ಎಲ್ಲವುದರ ನಮಗೆ ದೊರೆಯುವುದು ನಾಟಕಕ್ಕೆ ಜೊತೆ. ಅದರಲ್ಲಿಯ ದೃಶ್ಯಗಳು ನಿಜವೆಂದು ಎಣಿಸುತ್ತವೆ. ಪ್ರಕಾಶ ಯೋಜನೆಯ ಅನುಭವಿಸಲು ಬರುವುದು ಮೋಜು ವಿಭಿನ್ನ.

- ಸಾದರಿಕರಣದ ಅಭ್ಯಾಸದ ಸಮಯದಲ್ಲಿ ಮಕ್ಕಳಿಂದ ನೈಸರ್ಗಿಕ ಪ್ರಕಾಶದ ಉಪಯೋಗ ಮಾಡಲು ಬರಬೇಕು ಎಂಬುದರ ಸಲುವಾಗಿ ಬಾಗಿಲು, ಖಿಡಕಿಗಳು ತೆರೆಯುವುದು, ಮುಚ್ಚುವುದು ಮಾಡುವ ಅಭ್ಯಾಸ ಮಾಡಿಸಿಕೊಳ್ಳುವುದು. ಎಂದರೆ ಯೋಗ್ಯ ಸಮಯದಲ್ಲಿ ಕೃತಿಗಳ ಹೊಂದಾಣಿಕೆ ಸಾಧಿಸಲು ಬರುತ್ತದೆ.

CG -೪
C - ೪.೧
LO೦೩AE೩

## ವೇಶಭೂಷಣ ಮಾಡೋಣ

ಯಾವುದೊಂದು ಸಾದರಿಕರಣ ಮಾಡುವ ಮೊದಲು ನಾವು ಅದರ ಸಲುವಾಗಿ ಬೇರೆ ಬೇರೆ ತಯಾರಿ ಮಾಡುತ್ತೇವೆ. ಅದರ ಅಭ್ಯಾಸ ಮಾಡುತ್ತೇವೆ ಮತ್ತು ಯಾವ ಒಂದು ಭೂಮಿಕೆ ಮಾಡುವವರಿದ್ದೆವೆ ಅಂತಹ ಉಡುಪು ಧರಿಸಿಕೊಂಡು ಸಾದರಿಕರಣ ಮಾಡುತ್ತೆವೆ. ಇದನ್ನು ನೋಡುವಾಗ ನಮ್ಮ ಗೆಳೆಯಗೆಳತಿಯರಿಗೆ ಅದು ನಿಜ ಎನಿಸುವುದು. ಆದರೆ ಈ ಉಡುಪು ಎಂದರೇನೆ ವೇಶಭೂಷಣ ಇದನ್ನು ಆಯ್ಕೆ ಮಾಡುವಾಗ ಮೊದಲು ಗುಂಪಿನಲ್ಲಿ ಚರ್ಚೆ ಮಾಡಿ ನಿಶ್ಚಿತ ಪಡಿಸಿರಿ. ನಂತರ ಆ ವೇಶಭೂಷಣ ಒಟ್ಟು ಗೂಡಿಸಿ ನಿಮ್ಮ ಅಳತೆಯದ್ದು ಇದೆ ಅಥವಾ ಇಲ್ಲ ಎಂಬುದನ್ನು ನೋಡಿರಿ ಮತ್ತು ಈಗ ಅಭ್ಯಾಸವನ್ನು ಮಾಡಲು ಪ್ರಾರಂಭಿಸಿ. ಅಭ್ಯಾಸ ಮಾಡುವಾಗ ವೇಶಭೂಷಣ (ಮಾಡಿ) ಧರಿಸಿ ಅಭ್ಯಾಸ ಮಾಡಿದರೆ ಆ ಉಡುಪಿನಲ್ಲಿ ನಡೆಯಲು, ಕುಡಲು, ಎದ್ದು ನಿಲ್ಲಲು ಅಭ್ಯಾಸ ಆಗುತ್ತದೆ ಹಾಗೂ ಸಾದರಪಡಿಸುವ ಸಮಯದಲ್ಲಿ ನಮ್ಮ ಗಮನ ಅದರ ಕಡೆಗೆ ಹೋಗುವುದ್ದಿಲ್ಲ ಮತ್ತು ನಮ್ಮ ಸಾದರಿಕರಣ ಬಹಳ ಸುಂದರವಾಗುತ್ತದೆ.



- ಸಾದರಿಕರಣದಲ್ಲಿಯ ಪಾತ್ರಗಳ ವೇಶಭೂಷೆ ಮಾಡಿಸಿ ಅಭ್ಯಾಸ ಮಾಡಿಸಿಕೊಳ್ಳುವುದು.

CG -೨, ೩
C-೩.೧, ೩.೨
Lo- ೦೩AE೩೫

## ನಡೆಯಿರಿ ಅಭ್ಯಾಸ ಮಾಡೋಣ

(ನೀವು) ನಾವು ಆಯ್ಕೆ ಮಾಡಿದ ಪ್ರಸಂಗದ ಅಥವಾ ನಾಟಕದ ಸಾದರಿಕರಣದ ಅಭ್ಯಾಸ ನಿಮ್ಮ ವರ್ಗದಲ್ಲಿ ಮಾಡಿ ಬನ್ನಿರಿ. ಇದರ ಸಲುವಾಗಿ ವರ್ಗದಲ್ಲಿಯ ಕುಳಿತುಕೊಳ್ಳುವ ವ್ಯವಸ್ಥೆ ಬದಲಿಸೋಣ ಮತ್ತು ಮಕ್ಕಳಿಗೆ ಸಾದರಿಕರಣದ ಸಲುವಾಗಿ ಸ್ಥಳ ಮಾಡಿ ಕೊಡೋಣ.

- ಅಭ್ಯಾಸ ಮಾಡುವಾಗ ಪ್ರಸಂಗಾನುರೂಪವಾಗಿ ಪ್ರಕಾಶ ಯೋಜನೆಯ ಉಪಯೋಗ ಮಾಡಿ ಬನ್ನಿರಿ.
- ಅಭ್ಯಾಸ ಮಾಡುವಾಗ ಸಾದರಿಕರಣದ ಸಲುವಾಗಿ ಅವಶ್ಯಕ ಸಾಹಿತ್ಯಗಳನ್ನು ಹೊಂದಿಸಿ ಉಪಯೋಗ ಪ್ರಾರಂಭ ಮಾಡೋಣ.
- ಒಂದು ವೇಳೆ ಸಾಹಿತ್ಯ ಇಲ್ಲದಿದ್ದರೆ ಉಪಲಬ್ಧ ಸಾಹಿತ್ಯಗಳನ್ನು ಸಂಗೀತ ಕೊಡುವ ಸಲುವಾಗಿ ಉಪಯೋಗ ಮಾಡೋಣ.
- ನಾಟಕದಲ್ಲಿಯ ಪಾತ್ರಗಳ ವೇಶಭೂಷೆ ಆಯ್ಕೆ ಮಾಡೋಣ ಮತ್ತು ವೇಶಭೂಷದೊಂದಿಗೆ ಅಭ್ಯಾಸ ಮಾಡೋಣ.
- ಪರದೆ ತಯಾರಿಸುವ ಸಲುವಾಗಿ ನಮ್ಮ/ನಿಮ್ಮ ಸಹಪಾಟಿಗಳ ಸಹಾಯ ತೆಗೆದುಕೊಂಡು ಅವರ ಅಭ್ಯಾಸ ಪ್ರಾರಂಭ ಮಾಡೋಣ.
- ಸುಂದರವಾಗಿ ಸಾದರಿಕರಣದ ಸಲುವಾಗಿ ಸಿದ್ಧರಾಗೋಣ.

ಸಾದರಿಕರಣ –

## ನನ್ನ ಕೃತಿ

ಸಾಕಷ್ಟು ಅಭ್ಯಾಸದ ನಂತರ ವರ್ಗ ನಾಣ್ಯಗೃಹದ ರಚನೆ ಮಾಡಿ ಅಭ್ಯಾಸದನುಸಾರ ವೇಶಭೂಷಣ, ಸಾಹಿತ್ಯ, ಸಂಗೀತ, ಪ್ರಕಾಶಯೋಜನೆ ಈ ತಾಂತ್ರಿಕ ಅಂಗಗಳ ಸುಯೋಗ್ಯ ಉಪಯೊಗ ಮಾಡಿ ಸುಂದರವಾಗಿ ಸಾದರಿಕರಣ ಮಾಡಿರಿ.

ಸಾದರಿಕರಣದ ನಂತರ ಇನ್ನಿತರ ವಿದ್ಯಾರ್ಥಿ ಹಾಗೂ ಶಿಕ್ಷಕರು ಕೊಟ್ಟ ಸೂಚನೆಯ ವಿಚಾರ ಮಾಡಿ ಪುನಃ ಸಾದರಿಕರಣ ಮಾಡಿರಿ.

೧. ಪಠ್ಯಪುಸ್ತಕ ಅಥವಾ ಕಥೆಯ ಪುಸ್ತಕದಲ್ಲಿಯ ಒಂದು ಪ್ರಸಂಗ ಆಯ್ಕೆ ಮಾಡಿ ಆ ಪ್ರಸಂಗದ ಸಾದರಿಕರಣದ ಸಲುವಾಗಿ –

- ಪಾತ್ರಗಳ ಆಯ್ಕೆ
- ಅವಶ್ಯಕ ಸಾಹಿತ್ಯ
- ಧ್ವನಿ
- ಪ್ರಕಾಶ ಯೋಜನೆ
- ವೇಶಭೂಷಣ

ಈ ಎಲ್ಲ ತಾಂತ್ರಿಕ ವಿಷಯಗಳ ನಿಯೋಜನ ಪೂರ್ವಕ ಉಪಯೋಗ ಮಾಡಿ ಗುಂಪಿನಲ್ಲಿ ಸಾದರಿಕರಣ ಮಾಡಿರಿ.

- ಸಾದರಿಕರಣದ ಸಲುವಾಗಿ ಮೊದಲು ಅಭ್ಯಾಸ ಮಾಡಿದ ಅಥವಾ ಪಠ್ಯಪುಸ್ತಕದಲ್ಲಿಯ, ಕಥೆಗಳ, ಪುಸ್ತಕದಲ್ಲಿಯ, ವಯಸ್ಸಿಗನುಸರಿಸಿ ಯಾವುದೊಂದು ಪ್ರಸಂಗ ಅಥವಾ ಕಿರುನಾಟಕ ಆಯ್ಕೆ ಮಾಡುವ ಅವಕಾಶ ಮಾಡಿಕೊಡಬೇಕು.

CG –೨, ೩
C–೩.೧, ೩.೨
Lo– ೦೩AE೩೩
೦೩AE೩೫
೦೩AE೩೮


ಧಾ ಧೀಂ ಧೀಂ ಧಾ
ಸಂಗೀತ



# ೯. ಎಲ್ಲರೂ ಕೂಡಿ ಹಾಡೋಣ!



ನಮ್ಮೆಲ್ಲರಿಗೂ ಹಾಡು ಹಾಡಲು ಅಥವಾ ಕೇಳಲು ತುಂಬ ಹಿಡಿಸುತ್ತದೆ ನಿಜಾ ತಾನೆ! ಆದರೆ ನಿಮಗೆ ಗುರುತಿದೆಯೇನು? ಯಾವಾಗ ನಾವೆಲ್ಲರೂ ಒಟ್ಟಿಗೆ ಹಾಡುತ್ತೆವೆ ಆಗ ಆ ಹಾಡಿನ ಮೋಜು ಬೇರೆನೆ ಇರುತ್ತದೆ.

ಇಂದು ನಾವು ಇಂತಹ ಕೆಲವು ಸುಂದರ ಹಾಡುಗಳ ಪರಿಚಯ ಮಾಡಿಕೊಳ್ಳುವವರಿದ್ದೆವೆ. ನಡೆಯಿರಿ ಸ್ವರಗಳ ಈ ಸುಂದರ ಲೋಕದಲ್ಲಿ ಹೋಗೋಣ ಮತ್ತು ಹಾಡೋಣ....

### ರಾಜ್ಯಗೀತೆ

ರಾಷ್ಟ್ರೀಯ ಏಕಾತ್ಮತೆಯ ಭಾವನೆ ಮೈಗೂಡಿಸುವ ಸಲುವಾಗಿ ಹಾಗೂ ಮಹಾರಾಷ್ಟ್ರದ ಗುಣಗಾನ ಹಾಡುವ ಸಲುವಾಗಿ ರಾಜ್ಯಗೀತೆ ಹಾಡಲಾಗುತ್ತದೆ. ಈ ಹಾಡಿನಲ್ಲಿ ಮಹಾರಾಷ್ಟ್ರದ ಗೌರವಶಾಲಿ ಇತಿಹಾಸದ ವರ್ಣನೆ ಮಾಡಲಾಗಿದೆ. ರಾಜ್ಯಗೀತೆಯನ್ನು ಗೌರವಿಸುವ ಸಲುವಾಗಿ ಸಾವಧಾನ ಸ್ಥಿತಿಯಲ್ಲಿ ಎದ್ದು ನಿಂತು ರಾಜ್ಯಗೀತೆ ಹಾಡಲಾಗುತ್ತದೆ.

### ರಾಜ್ಯಗೀತೆ

ಜಯ ಜಯ ಮಹಾರಾಷ್ಟ್ರ ಮಾಝಾ,
ಗರ್ಜಾ ಮಹಾರಾಷ್ಟ್ರ ಮಾಝಾ
ಜಯ ಜಯ ಮಹಾರಾಷ್ಟ್ರ ಮಾಝಾ,
ಗರ್ಜಾ ಮಹಾರಾಷ್ಟ್ರ ಮಾಝಾ ॥ ಪ ॥
ಭಿತಿ ನ ಆಮ್ಹಾ ತುಝಿ ಮುಳಿ ಹಿ ಗಡಗಡಣ್ಯಾರ್ಯಾ ನಭಾ
ಅಸ್ಮಾನಾಚ್ಯಾ ಸುಲತಾನಿಲಾ ಜವಾಬ ದೇತಿ ಜಿಬಾ
ಸಹ್ಯಾದ್ರಿಚಾ ಸಿಂಹ ಗರ್ಜತೋ ಶಿವ ಶಂಭು ರಾಜಾ
ದರಿ ದರೀತೂನ ನಾದ ಗುಂಜಲಾ ಮಹಾರಾಷ್ಟ್ರ ಮಾಝಾ
ಜಯ ಜಯ ಮಹಾರಾಷ್ಟ್ರ ಮಾಝಾ, ಗರ್ಜಾ
ಮಹಾರಾಷ್ಟ್ರ ಮಾಝಾ ॥ ೧ ॥
ಕಾಳ್ಯಾ ಛಾತಿವರಿ ಕೊರಲಿ, ಅಭಿಮಾನಾಚಿ ಲೇಣಿ
ಪೊಲಾದಿ ಮನಗಟೆ ಖೆಳತಿ, ಖೇಳ ಜೀವಘೇಣಿ
ದಾರಿದ್ರ್ಯಾಚ್ಯಾ ಉನ್ಹಾತ ಶಿಜಲಾ
ನಿಢಳಾಚ್ಯಾ ಘಾಮಾನೆ ಭಿಜಲಾ
ದಿಲ್ಲಿಚೆ ಹಿ ತಖ್ತ ರಾಖಿತೋ, ಮಹಾರಾಷ್ಟ್ರ ಮಾಝಾ
ಜಯ ಜಯ ಮಹಾರಾಷ್ಟ್ರ ಮಾಝಾ, ಗರ್ಜಾ
ಮಹಾರಾಷ್ಟ್ರ ಮಾಝಾ
ಜಯ ಜಯ ಮಹಾರಾಷ್ಟ್ರ ಮಾಝಾ ॥ ೨ ॥

ಹಾಡು – ರಾಜಾ ಬಢೆ



- ರಾಜ್ಯಗೀತೆಯನ್ನು ರಾಗಬದ್ಧವಾಗಿ ಅಭ್ಯಾಸ ಮಾಡಿಸಿಕೊಳ್ಳಿರಿ.

CG - ೧
C - ೧.೧
LO ೦೩AE೪೩/೫೭

**ಶ್ಲೋಕ** – ನಮ್ಮ ದಿನದ ಪ್ರಾರಂಭ ಆನಂದಮಯ ಮಾಡುವಸಲುವಾಗಿ ನಾವು ದೇವರ ಮುಂದೆ ಶ್ಲೋಕ ಹೇಳುತ್ತೆವೆ. ಅದರಿಂದ ನಮ್ಮ ಮೇಲೆ ಒಳ್ಳೆಯ ಸಂಸ್ಕಾರಗಳಾಗುತ್ತವೆ. ಊಟದ (ಮುಂಚೆ) ಮೊದಲು ಈ (ಮುಂದಿನ) ಕೆಳಗಿನ ಶ್ಲೋಕ ಹೇಳಲಾಗುತ್ತದೆ.

ಬ್ರಹ್ಮಾರ್ಪಣಂ ಬ್ರಹ್ಮ ಹವಿರ್ಬ್ರಹ್ಮಾಗ್ನೌ ।
ಬ್ರಹ್ಮಣಾ ಹುತಮ್ ।
ಬ್ರಹ್ಮೈವತೇನ ಗಂತವ್ಯಂ ।
ಬ್ರಹ್ಮಕರ್ಮಸಮಾಧಿನಾ ।।

(ಅನ್ನಪೂರ್ಣಾಷ್ಟಕಂ:)
ಅನ್ನಪೂರ್ಣೇ ಸದಾ ಪೂರ್ಣೇ ।
ಶಂಕರ ಪ್ರಾಣವಲ್ಲಭೇ ।
ಜ್ಞಾನವೈರಾಗ್ಯ ಸಿದ್ಧರ್ಥಂ ಭಿಕ್ಷಾಂ ।
ದೇಹೀ ಚ ಪಾರ್ವತಿ ।।



**ಓದು ಮತ್ತು ಹೇಳು.**

ನಾವು ನಮ್ಮ (ದಿನಸದ) ದಿನದ, ಅಭ್ಯಾಸದ ಪ್ರಾರಂಭ ಪ್ರಾರ್ಥನೆಯಿಂದ ಮಾಡಿದಾಗ ನಮ್ಮ ಮನಸ್ಸು ಪ್ರಸನ್ನವಾಗುತ್ತದೆ. ನಾವು ಈಗ ಈ ಮುಂದಿನ ಪ್ರಾರ್ಥನೆ ಒಟ್ಟಿಗೆ ಸೇರಿ ಹಾಡೋಣ.

**ಪ್ರಾರ್ಥನೆ**

ಓಂ ಅಸತೋ ಮಾ ಸದ್ಗಮಯ ।
ತಮಸೋ ಮಾ
ಜ್ಯೋತಿರ್ಗಮಯ ।
ಮೃತ್ಯೋರ್ಮಾ
ಅಮೃತಂಗಮಯ ।।
ಓಂ ಸಹ ನಾವವತು ।
ಸಹ ನೌ ಭುನಕ್ತು ।
ಸಹ ವೀರ್ಯಂ ಕರಾವಾವಹೈ ।
ತೇಜಸ್ವಿನಾವಧೀತಮಸ್ತು ಮಾ
ವಿದ್ವಿಷಾವಹೈ ।।
ಓಂ ಶಾಂತಿ: ಶಾಂತಿ: ಶಾಂತಿ: ।।



- ಉಪಲಬ್ಧ ಸಾಧನಗಳ ಸಹಾಯದಿಂದ ಶ್ಲೋಕ ಹಾಗೂ ಪ್ರಾರ್ಥನೆ ಇವುಗಳನ್ನು ರಾಗಬದ್ಧವಾಗಿ ಹೇಳುವ ಅಭ್ಯಾಸ ಮಾಡಿಸಿ ಕೊಳ್ಳಬೇಕು.

CG-೧
C-೧.೧
LO ೦೩.AE೪೪

ಶಾಲೆಯ ಪ್ರಾರಂಭವು ಯಾವಾಗಲೂ ಪ್ರಾರ್ಥನೆಯಿಂದಾಗುತ್ತದೆ. ಅದರಲ್ಲಿ ನಾವು ರಾಷ್ಟ್ರಗೀತೆ, ರಾಜ್ಯಗೀತೆ, ಶ್ಲೋಕ, ಪ್ರಾರ್ಥನೆ ಸಮೂಹಗೀತೆ (ಒಗ್ಗಟ್ಟಿನಲ್ಲಿ) ಒಟ್ಟಾಗಿ ಹೇಳುತ್ತೇವೆ. ಇದರಿಂದ ಮನಸ್ಸು ಏಕಾಗ್ರತೆಯಿಂದಿರುತ್ತದೆ, ಪ್ರಸನ್ನ ಎನಿಸುತ್ತದೆ.

ನಡೆಯಿರಿ ಹಾಗಿದ್ದರೆ ಎಲ್ಲರೂ ಕೂಡಿ ಕೆಳಗಿನ ಪ್ರಾರ್ಥನೆ ಕೇಳಿ ಹೇಳೋಣ, ಹಾಡೋಣ.

**ಪ್ರಾರ್ಥನೆಗೀತೆ**



ಈ ಜಗಕೆಲ್ಲ ಬೆಳಕಾಗಿ ಬಾ ಪ್ರಭುವೇ
ನನ್ನೀ ಮನದಲಿ ನೆಲೆಯಾಗಿ ಬಾ
ಪ್ರಭುವೇ ।।
ಕತ್ತಲ ಹಾದಿಯ ಸೀಳುತ್ತ ಬಾ
ಸತ್ಯದ ದೀವಿಗೆ ಹಚ್ಚುತ್ತ ಬಾ
ಪ್ರೀತಿಯ ಕಾರುಣ್ಯ ಸುರಿಸತ್ತ ಬಾ
ಪ್ರಭುವೇ ।।೧।।
ತಪ್ಪುಗಳೆನ್ನನು ತಿದ್ದುತ್ತ ಬಾ
ಒಳಿತಿನ ಹಾದಿಯ ತೋರಿಸುತ್ತ ಬಾ
ವಿದ್ಯೆಯ ಬುದ್ಧಿಯ ನೀಡುತ್ತ ಬಾ
ಪ್ರಭುವೇ ।।೨।।
ಈ ಸೃಷ್ಟಿಯನ್ನು ಕಾಪಾಡುವುದು।
ನಮಗೆ ಅತ್ಯಮೂಲ್ಯ ಎನಿಸಲಿ ।
ಮತೆ ಮತ್ತು ಸಮಾನತೆಯ।
ನಮಗೆ ಪ್ರೇರಣೆ ನೀಡು ।।೩।।

**ಗಮನದಲ್ಲಿಡಿರಿ:**

ಪ್ರಾರ್ಥನೆಯನ್ನು ಜೋರಾಗಿ, ಕಿರುಚಿ ಹೇಳಬಾರದು ಅದನ್ನು ಭಾವಪೂರ್ಣವಾದ ರಾಗದಲ್ಲಿ ಸಾವಕಾಶವಾಗಿ ಹೇಳಬೇಕು.

- ಪ್ರಾರ್ಥನೆ ರಾಗದಲ್ಲಿ ಹಾಡಿಸಿಕೊಳ್ಳುವುದು ಹಾಗೂ ಅದರ ಮೇಲೆ ಚರ್ಚೆ ಮಾಡಬೇಕು.
- ಹಾಡಿನ ಧಾಟಿ ಶಬ್ದೋಚ್ಚಾರ ಸ್ವರ ಹಾಗೂ ತಾಳ ಈ ವಿಷಯದ ಬಗ್ಗೆ ಮಾರ್ಗದರ್ಶನ ಮಾಡುವುದು.

CG-೧
C-೧.೨
lo೦೩AE೪೫/
೪೬/ ೫೭

## ಬಾಲಗೀತೆ

ಬಾಲಗೀತೆಯನ್ನು ಹಾಡುವಾಗ ನೀವು ಯಾವಾಗಾದರು ನೃತ್ಯ ಮಾಡಿದಿರಾ? ಯಾವ ಬಾಲಗೀತೆಯ ಮೇಲೆ ನಿಮಗೆ ನೃತ್ಯ ಮಾಡಲು ಹಿಡಿಸುವುದು? ನಡೆಯಿರಿ ಹಾಗಿದ್ದರೆ ನಾವು ಕೂಡಾ ನಿಸರ್ಗದ (ಬಣ್ಣದಲ್ಲಿ ಬಣ್ಣೆ) ಸಾನಿಧ್ಯದಲ್ಲಿ ಮುಳುಗಿ ಹೋಗೋಣ ಮತ್ತು ಈ ಗೀತೆಯ ಮಾಧ್ಯಮದಿಂದ ಪಕ್ಷಿಗಳ ಚಿಲಿಪಿಲಿ, ನೀರಿನ ಜುಳು ಜುಳು ನಾದ ಅಭಿನಯದೊಂದಿಗೆ ಸಾದರ ಪಡಿಸೋಣ!

ದೋಣಿ ಸಾಗಲಿ, ಮುಂದೆ ಹೋಗಲಿ,
ದೂರಿ ದೂರಕೆ ತೇಲಿ ಹೋಗಲಿ.
ಚಿನ್ನದ ಹಕ್ಕಿ ಹಾಡಲಿ,
ರೆಕ್ಕೆ ಬಿಚ್ಚಿ ಹಾರಲಿ.

ಅಲೆಯ ಮೇಲೆ ಅಲೆಯು ಬರಲಿ,
ದೋಣಿ ಮೇಲಕೆ ಕೆಳಗೆ ಆಡಲಿ.
ಗಾಳಿ ಬೀಸಲಿ, ತರಂಗ ತೇಲಲಿ,
ನಮ್ಮ ಪಯಣ ಸಾಗಲಿ.

ಹಸಿರು ಬೆಟ್ಟ ಸಾಲು ಕಾಣಲಿ,
ಹಕ್ಕಿ ಹಿಂಡು ಹಾರಿ ಹೋಗಲಿ.
ಮುದ್ದು ಮಕ್ಕಳು ನಗುತ ಹಾಡಲಿ,
ದೋಣಿ ಮುಂದೆ ಸಾಗಲಿ.

ನೆಲದ ಮೇಲಿನ ಚಿಂತೆ ಮರೆಯಲಿ,
ನೀರಿನ ಆಟವು ಖುಷಿಯ ನೀಡಲಿ.
ಸೂರ್ಯನ ಕಿರಣ ಹೊಳೆಯಲಿ,
ನಮ್ಮ ದೋಣಿ ಸಾಗಲಿ.

ಕವಿ – ಎಂ. ವಿ. ಸೀತಾರಾಮಯ್ಯ



- ಉಪಲಬ್ಧ ಸಾಧನದ ಉಪಯೋಗ ಮಾಡಿ ವಿದ್ಯಾರ್ಥಿಗಳಿಂದ ರಾಗ ಬದ್ಧವಾಗಿ ಅಭಿನಯದೊಂದಿಗೆ (ಗೀತೆ) ಹಾಡುಗಳನ್ನು ಹಾಡಿಸಿಕೊಳ್ಳುವುದು.
- ಪ್ರತಿಯೊಬ್ಬರಿಗೂ ಹಾಡಿನಲ್ಲಿ ಸಹಭಾಗಿ ಮಾಡಿಕೊಳ್ಳುಬೇಕು.

CG – ೨
C – ೨.೧
LO೦೩AE
೪೭/೫೭

## ಬಾಲಗೀತೆ

ಬಾರೋ ಬಾರೋ ಬಣ್ಣದ ಹಕ್ಕಿ
ಬಣ್ಣದ ರೆಕ್ಕೆಯ ಕಣ್ಣಿನ ಹಕ್ಕಿ!

ಹಾರಲು ರೆಕ್ಕೆಯ ಹರಡುತ ಬಾ
ಕೂಡಲು ಕೊಂಬೆಯ ಹುಡುಕುತ ಬಾ!
ನನ್ನಯ ಒಳಿಗೆ ಆಡಲು ಬಾ
ನನ್ನೊಳು ಕೀಟಲೆ ಮಾಡಲು ಬಾ!

ನಿನಗೆ ಗೂಡನ್ನು ಕಟ್ಟಿ ಕೊಡುವೆ
ತಿನ್ನಲು ಹಣ್ಣನ್ನು ಆರಿಸಿ ಕೊಡುವೆ!
ಕುಡಿಯಲು ಹಾಲನ್ನು ತಟ್ಟೆಲಿಡುವೆ
ನನ್ನೊಡನಾಟಕೆ ಜೊತೆಯಾಗು ಬಾ!

ಅಮ್ಮನು ಇಟ್ಟ ಕಜ್ಜಾಯ ತರುವೆ
ಅಪ್ಪನು ತಂದ ಆಟಿಕೆ ಕೊಡುವೆ!
ರೆಕ್ಕೆಯ ಬಿಚ್ಚುತ್ತ ಹಾರುತ ಬಾ
ಬಣ್ಣದ ಹಕ್ಕಿಯೇ ಬೇಗನೆ ಬಾ!



ಕವಿ – ಕೈಯಾರ ಕಿಞ್ಞಣ್ಣ ರೈ

- ಈ ಬಾಲಗೀತೆಯನ್ನು ಚಪ್ಪಾಳೆಯ ತಟ್ಟುತ್ತಾ (ತಾಳ ಮತ್ತು) ರಾಗಬದ್ಧವಾಗಿ ಹಾಡುವ ಅಭ್ಯಾಸ ಮಾಡಿರಿ.
- ಈ ಬಾಲಗೀತೆಯನ್ನು ಹಾಡುವಾಗ ನಿಮಗೆ ಹೇಗೆ ಎನಿಸುತ್ತದೆ ಎಂಬುದರ ಬಗ್ಗೆ ನಿಮ್ಮ ವರ್ಗಮಿತ್ರರೊಂದಿಗೆ ಗುಂಪು ಚರ್ಚೆ ಮಾಡಿರಿ.
- ಈ ಬಾಲಗೀತೆಯಲ್ಲಿಯ ಯಾವ ಸಾಲು ನಿಮಗೆ ಹಿಡಿಸಿರುವ ವಿಷಯದ ಬಗ್ಗೆ ಸಹಕಾರ್ಯರ ಜೊತೆಗೆ ಚರ್ಚೆ ಮಾಡಿರಿ.



- ಚಪ್ಪಾಳೆ ತಟ್ಟುತ್ತಾ ಹಾಗೂ ತಾಳದಲ್ಲಿ ಬಾಲಗೀತೆ ಹಾಡಿಸಿಕೊಳ್ಳುವುದು.
- ಬಾಲಗೀತೆಯ ಬಗ್ಗೆ ಏನೆನಿಸಿತು, ಯಾವ ಸಾಲು ಹಿಡಿಸಿತು ಎಂಬುದರ ಬಗ್ಗೆ ಚರ್ಚೆ ಮಾಡಿಸಿಕೊಳ್ಳುವುದು.

CG - ೧/೨
C - ೧.೧/೨.೨
LO ೦೩AE
೪೪/೪೫/ ೫೭

## ಅಭಿನಯಗೀತೆ :

ಕೇವಲ ಹಾಡು ಹಾಡದೆ ಅದರಲ್ಲಿಯ ಶಬ್ದಗಳ ಅರ್ಥ ಗಮನಕ್ಕೆ ತೆಗೆದುಕೊಂಡು ಅಭಿನಯದೊಂದಿಗೆ ಹಾಡು ಸಾದರಪಡಿಸೋಣ.

ಅಡುಗೆ ಮನೆಯಲ್ಲಿ ಒಂದು ದಿನ ಫಂಕ್ಷನ್ ನಡೆದಿತ್ತು,
ತರಕಾರಿಗಳೆಲ್ಲಾ ಕೂಡಿ ಆಟ ಆಡುತಲಿತ್ತು ॥ಪ॥

ದಪ್ಪಗಿದ್ದ ಕುಂಬಳಕಾಯಿ ತಬಲ ಬಾರಿಸಿತು,
ಉದ್ದಗಿದ್ದ ಬದನೆಕಾಯಿ ಡ್ಯಾನ್ಸ್ ಮಾಡುತಿತ್ತು ॥೨॥

ನೆಲದ ಒಳಗಿದ್ದ ಮೂಲಂಗಿ ಜಪ್ ಜಪ್ ಎಂದಿತು,
ರೆಡ್ ಕಲರ್ ಕ್ಯಾರೆಟ್ ಬಂದು ಹಾಡು ಹಾಡಿತು ॥೨॥

ಹಸಿರಾಗಿದ್ದ ಮೆಣಸಿನಕಾಯಿ ವ್ಹಿಜಲ್ ಹೊಡೆಯಿತು,
ಚಿಕ್ಕದಾಗಿದ್ದ ನಿಂಬೆಹಣ್ಣು ಜ್ಯೂಸ್ ನೀಡಿತು ॥೩॥

ದಪ್ಪಗಿದ್ದ ಆಲೂಗಡ್ಡೆ ರೋಲ್ ಮಾಡುತಿತ್ತು,
ಕಣ್ಣೀರು ತರಿಸೋ ಈರುಳ್ಳಿ ಮೂಲೆಲಿ ಅಳುತಿತ್ತು ॥೪॥

ಕವಿ – ಜಿ.ಪಿ.ರಾಜರತ್ನಂ



**ಗಮನದಲ್ಲಿಡಿರಿ :**

ಬಾಲಗೀತೆಯಲ್ಲಿ (ಬಾಲಕರ) ಮಕ್ಕಳ ಇಷ್ಟಾನಿಷ್ಟಗಳು, ನಿಸರ್ಗ, ಪಶುಪಕ್ಷಿ, ಆಟಿಗೆ ಸಾಮಾನ್ಯ ಇತ್ಯಾದಿಗಳ ವರ್ಣನೆ ಇರುತ್ತದೆ.

- ಅಭಿನಯ ಗೀತೆಯ ಅಭ್ಯಾಸ ರಾಗಬದ್ಧವಾಗಿ ಹಾಗೂ ಅಭಿನಯದೊಂದಿಗೆ ಮಾಡಿಸಿಕೊಳ್ಳುವುದು.

CG - ೨
C - ೨.೧
LO
೦೩AE೪೭/೫೭

## ದೇಶಭಕ್ತಿ ಸಮೂಹ ಗೀತೆ

ನಾವು ಭಾರತ ದೇಶದಲ್ಲಿ ವಾಸಿಸುತ್ತೆವೆ ಈ ದೇಶದ ಬಗ್ಗೆ ನಮಗೆ ಅಭಿಮಾನವಿರಲೇಬೇಕು. ಈ ದೇಶದ ಸೈನಿಕರು ಗಡಿಭಾಗದಲ್ಲಿ ಅವರಿಗೆ ನೇಮಿಸಿದ ಸ್ಥಳದಲ್ಲಿ ಯಾವಾಗಲೂ ದೇಶದ ರಕ್ಷಣೆ ಮಾಡುತ್ತಿರುತ್ತಾರೆ. ಆದ್ದರಿಂದಲೇ ನಾವೆಲ್ಲರೂ ಸುರಕ್ಷಿತವಾಗಿ ಇರಲು ಸಾಧ್ಯವಾಗುವುದು. ಈಗ ನಾವೆಲ್ಲರೂ ಮುಂದಿನ ದೇಶಭಕ್ತಿಯ ಹಾಡನ್ನು ಹಾಡೋಣ.

ಇದು ಭಾರತ ಇದು ಭಾರತಿ,
ಇದು ಬಾಳಿನ ಬೆಳಕಿನ ರತಿ॥
ತಾ ತಾ ಆರತಿ--- ಎತ್ತಿರೆ ಆರತಿ,
ನಮ್ಮ ಹೆಮ್ಮೆಯ ದೇಶಕೆ ಜಯದ ಆರತಿ॥
ಇದು ಭಾರತ ॥ಪ॥



ತ್ಯಾಗ ಬಲಿದಾನದ ಇತಿಹಾಸ ಹೊಂದಿದ ಭೂಮಿ,
ಗಾಂಧಿ, ಸುಭಾಷರ ತತ್ತ್ವಸಾರಿದ ಸ್ವಾಮಿ,
ಜ್ಞಾನ ವಿಜ್ಞಾನದ ಪಥದಲ್ಲಿ ಸಾಗುವ ಧೀರ,
ವಿಶ್ವದ ನಕ್ಷೆಯಲಿ ಮಿನುಗುವ ನವ ನಕ್ಷತ್ರ
ಇದು ಭಾರತ ॥೧॥

ಜಾತಿ ಮತ ಭೇದಗಳನ್ನು ದೂಡಿ ನಿಂತ ದೇಶ,
ವಿವಿಧತೆಯಲಿ ಏಕತೆಯೇ ನಮ್ಮ ಮೂಲ ಮಂತ,
ಪ್ರಗತಿಯ ಹಾದಿಯಲಿ ಮುನ್ನುಗ್ಗಿ
ನಡೆಯುವೆವು,
ಭಾರತಾಂಬೆಯ ಕೀರ್ತಿಯನ್ನು ಮುಗಿಲೆತ್ತರಕ್ಕೆ
ಏರಿಸುವೆವು
ಇದು ಭಾರತ ॥೨॥

